ಕೊರವಂಜಿ

A. ANANTHIAH

ಸಂಪುಟ ೧೨ ಅಕ್ಟೋಬರ್ ೧೯೫೩ ೭ ಸಂಚಿಕೆ

ಬಳ್ಳಾರಿಗೆ ಸ್ವಾಗತ

ಕೃಷ್ಣದೇವರಾಯನ ಕಾಲದಲ್ಲಿ ಹಂಪೆಯಿಂದ ಮೈಸೂರವರೆಗೂ ರಾಯನ ಒಡ್ಡೋಲಗದಲ್ಲಿ ಜರುಗಿದ ಹಾಸ್ಯದ ತುಣುಕುಗಳು ಹರಡುತ್ತಿದ್ದುವಂತೆ. ಆನೆಯ ಮಾವುತ ಗಡಗಡ ಎಂದು ನಡುಗುತ್ತಾ ಜ್ವರ ಬಂದುಬಿದ್ದರೆ ರಾಯರು ಅಂದರಂತೆ. "ಆನೆಯ ದಳದ ಸರದಾರನಿರಬಹುದು. ಆದರೆ ಸೊಳ್ಳೆಯ ಕಡಿತಕ್ಕೆ ಪಾಲುದಾರನೇ ಅವ" ಎಂದು. ಇದು ಕರ್ಣಾಟಕಕ್ಕೆಲ್ಲಾ ಹರಡಿತ್ತಂತೆ. ಅರಿತವರೆಲ್ಲರೂ ಮಂದ ಸ್ಮಿತರಾದರಂತೆ.

ಇಂದು ಆ ಗತ ವೈಭವದ ಪುನರುಜ್ಜೀವನದ ಕುರುಹಾಗಿ ಆ ಪ್ರದೇಶಗಳ ಬಹುಭಾಗ ಕರ್ಣಾಟಕದ ಕೇಂದ್ರಮೂರ್ತಿಯಾದ ಮೈಸೂರಿಗೆ ಪುನರ್ನಿಮಲನವಾಗುತ್ತಿದೆ. ಇದು ನವ ಕರ್ಣಾಟಕದ ಬೃಹತ್ ಕರ್ಣಾಟಕದ ನಿರ್ಮಾಣದ ಸಂಕೇತ.

ಇಂತಹ ದಿವ್ಯ ಲಗ್ನದಲ್ಲಿ. ನಮ್ಮ ಕರ್ಣಾಟಕ ಬಳ್ಳಾರಿಯ ಸೋದರ ಸೋದರಿಯರಿಗೆ, ಕೊರವಂಜಿಯು ಇಷ್ಟೇ ಕಣಿ ಹೇಳುತ್ತಾಳೆ.

"ಕನ್ನಡ ತಾಯ ಸೇವೆಗೆ, ನಗುಮೊಗದ ಕನ್ನಡ ತಾಯ ಸೇವೆಗೆ ಬಳ್ಳಾರಿಯ ಅಕ್ಕತಂಗಿಯರೇ! ನೀವೂ ನಮ್ಮೊಡಗೂಡಿ ಬನ್ನಿ. ತಿಳಿ ಎದೆಯಿಂದ ನಮ್ಮ ಜತೆಗೆ ತಾಯಸೇವಗೆ ಬನ್ನಿ. ಇವರೂ ಅವರೂ ಎಂದೆನ್ನುವ ಭಾವ ತೊಲಗಿ ಎಲ್ಲರೂ ನಾವು" ಎಂದು ತಾಯಸೇವೆ ಮಾಡುವ." ಹಾಗಾಗಲಿ ಎಂದು.

ಕುಹಕಿಡಿಗಳು

ಲೋಕಸಭೆಯ ಸದಸ್ಯರು ಕ್ರಿಕೆಟ್ ಮ್ಯಾಚ್ ಆಡಿದರಂತೆ.

—ಡಾ|| ರಾಧಾಕೃಷ್ಣನ್‌ರವರು ತಮ್ಮ ಚಿರ ಪರಿಚಿತ ಉಡುಪಿನಲ್ಲಿ ರಂಗಕ್ಕೆ ಇಳಿದಾಗ, ಎದುರಾಳಿ ಬ್ಯಾಟನ್ನೆಸದು ಹೋದನೆಂಬುದೂ ಶಿಖಂಡಿಯನ್ನು ಕಂಡ ಭೀಷ್ಮನಂತಾದನೆಂಬುದೂ ಸುಳ್ಳಂತೆ.

*　　　*　　　*

ಮಲಯಾಳದ ಪ್ರಾಂತ್ಯದಲ್ಲಿ ಹೊಸ ಚುನಾವಣೆಗಳು ಆಗುವ ನಿಮಿತ್ತ ಮಹಿಳೆಯರೆಲ್ಲರೂ ಈಗ ಬಲು ಚಟುವಟಿಕೆಯಿಂದ ಕೂಡಿದ್ದಾರೆಂಬುದು ಕೇಳಿ ಬಂದ ಸುದ್ದಿ ಅಷ್ಟೆ!

*　　　*　　　*

ಭಾರತಾಂಬೆಯ ಪ್ರತಿನಿಧಿಯಾಗಿ, ಶ್ರೀಮತಿ ವಿಜಯಲಕ್ಷ್ಮಿಯವರು ಆಯ್ಕೆಯಾದುದರಲ್ಲಿ ಏನಾಶ್ಚರ್ಯ!

—ಗಂಡಸರು ಹೆಂಗಸರ ಪಾತ್ರವನ್ನು ವಹಿಸಬಾರದೆಂದು ನಮ್ಮ ಕಲಾ ಕೋವಿದರು ಅಂದಿನಿಂದಲೂ ಅನ್ನುತ್ತಿಲ್ಲವೇ!

*　　　*　　　*

ಭೂಲೋಕದಲ್ಲಿ ಭಾರತದ ಕೀರ್ತಿ ಹೆಚ್ಚಿದೆಯಂತೆ.

—ಆದರೂ ಮನೆಗೆ ಮಾರಿ ಪರರಿಗೆ ಉಪಕಾರಿ ಎಂದು ಹೇಳುವುದು ಶುದ್ಧ ಕುಹಕ.

*　　　*　　　*

ಕೊಂಕಣದಲ್ಲಿ ಮೂರು ಸಾರಿ ಸೀನಿದ ಅಪರಿಚಿತನೊಬ್ಬನನ್ನು ಪೋಲೀಸಿನವರು ನಿನ್ನ ಹೆಸರೇನು ಎಂದಾಗ "ಬೆರಿಯೊ" ಅಂದನಂತೆ.

ಈಗ ಅವನ ಸುದ್ದಿ ಭೂಲೋಕಕ್ಕೇ ಹರಡಿದೆಯಂತೆ—ಅಲ್ಲದೆ ಅಮೆರಿಕಾ ಪ್ರತಿನಿಧಿ ಅವನ ಭೇಟಿಗೆ ಹೊರಟಿರುವುದು ಸುಳ್ಳಂತೆ.

*　　　*　　　*

ಅಂಧ್ರಾತುರಾಣಾಂ-ನಭಯಂ-ನಲಜ್ಜಾ!

ಉರಿಗಾಳು

ಪ್ರಸಿದ್ಧ ಕನ್ನಡ ಕತೆಗಾರರೊಬ್ಬರನ್ನು, "ಕನ್ನಡದ ಓ ಹೆನ್ರಿ" ಎಂದು, ತಿಳಿದವರೊಬ್ಬರು ಹೆಸರಿಸಿದ್ದಾರೆ....ಅವರ ಕತೆಗಳ ಮೂಲವನ್ನು ತಿಳಿದವರಿರಬೇಕು.

* * *

ನಮ್ಮೂರಲ್ಲಿ ಇದುವರೆಗೂ ರಾತ್ರಿ ೯ ಗಂಟೆಗೆ ಗುಂಡು ಹಾರಿಸುತ್ತಿದ್ದುದನ್ನು ಇಂದಿನಿಂದ ನಿಲ್ಲಿಸಲಾಗಿದೆ....ಊರಿನವರಿಗಾಗುತ್ತಿದ್ದ ನಿದ್ರಾಭಂಗ ತಪ್ಪಿತು.

* * *

ಆಂಧ್ರರ ಬರಿಯ ಹೊಟ್ಟೆಯ ಮೇಲೆ ಈ ಹೊಸ ರಾಷ್ಟ್ರವನ್ನು ಹೇರಲಾಗಿದೆ (ಭಾಷಣ) ಅದು ಅನೇಕರ ಉಪವಾಸವ್ರತದ ಫಲ.

* * *

"ನಿಮ್ಮ ಆಹ್ವಾನ ಬಂತು; ನಿಮ್ಮ ವಿವಾಹ ಮಹೋತ್ಸವಕ್ಕೆ ಬರಲು ಸಾಧ್ಯವಿಲ್ಲದೆ ಹೋದದ್ದಕ್ಕೆ ವಿಷಾದಿಸುತ್ತೇನೆ" ಎಂದು ಬರೆದದ್ದಕ್ಕೆ, "ಚಿಂತೆ ಇಲ್ಲ, ಮುಂದಿನ ಸಲ ತಪ್ಪಿಸಿಕೊಳ್ಳಬೇಡಿ" ಎಂಬ ಉತ್ತರ....ಸಿನಿಮ ತಾರೆಯ ಮದುವೆ ಇರಬೇಕು.

* * *

ಈಗಿನ ವಿದ್ಯಾಭ್ಯಾಸ ಅಪ್ರಯೋಜಕ ಎಂದು ಮಂತ್ರಿಗಳೂ ಅಧಿಕಾರಿಗಳೂ ಭಾಷಣಮಾಡುತ್ತಾ ಬಂದರೆ, ಕೊಟ್ಟ ಫೀಜನ್ನೆಲ್ಲ ಹಿಂದಕ್ಕೆ ಕೊಡಬೇಕೆಂಬ ಚಳುವಳಿಯನ್ನು ವಿದ್ಯಾರ್ಥಿಗಳು ಹೂಡಬಹುದಂತೆ.

* * *

ಡಿಲ್ಲಿ ಪಾರ್ಲಿಮೆಂಟ್ ಸದಸ್ಯರು, ತಮ್ಮ ಕ್ರಿಕೆಟ್ ಆಟದಿಂದ, ಸುಮಾರು ೮೦,೦೦೦ ರೂ. ಲಾಭಗಳಿಸಿದರಂತೆ....ಅವರೆಲ್ಲ ಸುಮ್ಮನೆ ಮನೆಯಲ್ಲೇ ಕುಳಿತಿದ್ದರೆ ಇನ್ನೂ ಹೆಚ್ಚು ಲಾಭವಾಗುತ್ತಿತ್ತು.

* * *

ಆಂಧ್ರಪ್ರಾಂತ ಸ್ಥಾಪನೆಯಾದನಂತರ, ಅಲ್ಲಿಂದ ಇತರ ಭಾಷೆಯವರಾರೂ ಕಂಬಿಕೀಳಬೇಕಾಗಿಲ್ಲ (ಭಾಷಣ)....ಏಕೆ? ಆಂಧ್ರರೇ ಮತ್ತೆ ಚಳುವಳಿ ಹೂಡುತ್ತಾರೇನು?

* * *

" ಕೂದಲುದುರುವುದನ್ನು ತಪ್ಪಿಸಲು ಉಪಾಯ.... ಇಂದೇ ಬರೆಯಿರಿ" (ಜಾಹಿರಾತು) ನಮಗೆ ಆ ಉಪಾಯ ಏನೆಂಬುದು ಆಗಲೇ ಗೊತ್ತಿದೆ... ಬಟ್ಟತಲೆ ಸಂಪಾದಿಸಿಕೊಳ್ಳುವುದು.

*   *   *

ಗೋವಾ ಮುಂತಾದ ಪರರಾಷ್ಟ್ರವಸಾಹತುಗಳನ್ನು ಭಾರತ ಸಹಿಸಲಾರದು ಎಂದು ಮೊನ್ನೆ ಕಟ್ಟಕಡೆಯ ಎಚ್ಚರಿಕೆಯನ್ನು ಕೊಡಲಾಯಿತು.... ಹಾಗಾದರಿನ್ನು ಪರರಾಷ್ಟ್ರಗಳು ಹಾಯವಾಗಿರಬಹುದು.

*   *   *

ಮದುವೆ ಮಾಡಿಕೊಂಡವರು ಸಾಮಾನ್ಯವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲವೆಂದು ಒಬ್ಬರು ಸಂಶೋಧಕರು ಕಂಡುಹಿಡಿದಿದ್ದಾರೆ.... ಆತ್ಮಹತ್ಯೆ ಮಾಡಿಕೊಂಡವರೊಬ್ಬರೂ ನಂತರ ಮದುವೆಯಾಗಿಲ್ಲವಂತೆ.

*   *   *

" ನಿಮಗೆ ಅಗತ್ಯ ಬೇಕಾದ ಎಲ್ಲ ಪ್ರಪಂಚವ್ಯವಹಾರದ ತಿಳುವಳಿಕೆಯನ್ನೂ ಈ ಗ್ರಂಥ ತಿಳಿಸುವುದು" (ಪ್ರಕಟಣೆ) ಅಂದರೆ, ಹೆಂಡತಿಯೊಡನಿರುವವರೊಬ್ಬರಿಗೂ ಅದು ಬೇಕಿರುವುದಿಲ್ಲ.

*   *   *

ಅಮೇರಿಕಾ ಪ್ರವಾಸ ಮುಗಿಸಿ ಬಂದಿರುವವರು ಆ ದೇಶವನ್ನು ಕುರಿತು ಮಾಡಿರುವ ವರದಿಗಳ ನಿಜಾಂಶವೆಷ್ಟೆಂದು ವರದಿಮಾಡಲು ಇಷ್ಟರಲ್ಲೇ ಹಲವರನ್ನು ಅಮೇರಿಕಾಕ್ಕೆ ಕಳುಹಿಸುವ ಯೋಜನೆ ಬಂದಿದೆಯಂತೆ.

*   *   *

ಕೊರೀಯಾದಲ್ಲಿ ಶಾಂತಿರಕ್ಷಣೆಗಾಗಿ ಸಶಸ್ತ್ರ ಸೈನ್ಯವನ್ನು ಭಾರತ ಮತ್ತಿತರ ರಾಷ್ಟ್ರಗಳು ಕಳುಹಿಸಿವೆಯಂತೆ.

*   *   *

ಮೃಗಗಳಲ್ಲಿ ಪ್ರಗತಿ ಹೊಂದಿದ ಮೃಗ ಮನುಷ್ಯ (ಹೇಳಿಕೆ)

—ಹಿಂದಿನ ನೆನಪಿನಿಂದಲೇ, ಕೇಸರಿ, ಷೇರ್ ತೋಳ, ಇತ್ಯಾದಿ, ಬಿರುದುಗಳನ್ನು ಜನನಾಯಕರಿಗೆ ನಾವು ಕೊಡುವುದು !!

ಕೊರವಾವಲೋಕನ

ಆ ಸಾಯಂಕಾಲ ಕೊರವನ ಮಜವೇ ಮಜ! ಜರತಾರಿ ಪಂಚೆ ಕಚ್ಚೆ ಹಾಕಿ ಉಟ್ಟಿದ್ದಾನೆ. ಕರಿ ಅಂಗಿ ಧರಿಸಿದ್ದಾನೆ. ಮೈಸೂರು ಸರಿಗೆ ರುಮಾಲು ಧರಿಸಿದ್ದಾನೆ. ಶನಿವಾರ ಸಂಜೆ ದೇವಸ್ಥಾನಕ್ಕೆ ಹೋಗಿ ಬಂದವ. ಎರಡು ಹುಬ್ಬಿನ ಮಧ್ಯೆ ಕುಂಕುಮ, ಹಸಿ ಕುಂಕುಮ ಹಚ್ಚಿದ್ದಾನೆ.

ಗೋದಾವರಿ ಪ್ರವಾಹದಂತೆ ತನ್ನ ವಾಕ್ಸರಣಿಯನ್ನು ಹರಿಸುತ್ತಿದ್ದಾನೆ. ವಿಷಯ ಬಳ್ಳಾರಿ ಪುನರ್ಮಿಲಿನ. ವಿಜಯನಗರದ ಅರಸರಕಾಲದಿಂದ ಟಿಪ್ಪೂತನಕ ಬಳ್ಳಾರಿ ನಮ್ಮದೇ? ಇಂಗ್ಲೀಷಿನವರು ಬಂದ ಮೇಲೆ ಬೇರೆಯಾಯ್ತು. ಅವರು ಹೋದ ಮೇಲೆ ಒಂದೇ ಆಗಬೇಕು ಅಲ್ಲದೆ ಅವನ ಅಳಿಯ ಬಳ್ಳಾರಿಯಲ್ಲಿ ನೌಕರ. ಆತ ಮೈಸೂರು ಕಡೆಗೆ ವರ್ಗವಾಗುವ ಸಂದರ್ಭ ಬಂದರೆ ಚೆನ್ನಲ್ಲವೇ? ಅವನ ಹಾಗೇ ಇತರರಿದ್ದಾರಲ್ಲವೇ? ಇತ್ಯಾದಿ ಇತ್ಯಾದಿ ಭಾಷಣಮಾಡುತ್ತಿದ್ದಾನೆ.

೮ ಗಂಟೆ ಹೊಡೆಯಲು ಶುರು. ಕ್ಲಬ್ಬಿನ ಕಾರಕೂನ ಬಂದು ಕೊರವನಿಗೆ ನಮಸ್ಕರಿಸಿ "ಸಾರ್ ಇವತ್ತು ಮದ್ರಾಸ್ ರೈಲು ಎಂಟೂವರೆ ಗಂಟೆಗೆ ಬರುತ್ತೆ." ಎಂದು ಹೇಳಿ ಹೊರಟು ಹೋದ.

ಇನ್ನೂ ಎಂಟರ ಎಂಟನೇ ಗಂಟೆ ಬಾರಿಸಿಲ್ಲ ಗಡಿಯಾರ. ಅಷ್ಟರಲ್ಲೇ ಒಬ್ಬ ಕ್ಲಬ್ ಸೇವಕ ಬಂದ. ಕೊರವನಿಗೆ ಸಲಾಂಹಾಕಿದ "ಇನ್ನಿಕಿ ಎಟ್ಟರೇಕಿ ಮದ್ರಾಸ್ ಟ್ರೈನ್ ವರದ್ ಸಾರ್' ಅಂದ.

ಇನ್ನು ಒಂದು ನಿಮಿಷ ಆಗಿಲ್ಲ. ಇನ್ನೊಬ್ಬ ಸೇವಕ ಬಂದ. ಕೊರವನಿಗೆ ಸಲಾಂ ಮಾಡಿ "ಸಾಬ್, ಮದ್ರಾಸ್‌ಗಾಡಿ ಸಾಡೆಆಟ್‌ಕೊ ಆತಾಯ್" ಅಂದ.

ಕೊರವ ಬೇಗೆದ್ದು, ಭಾಷಣ ತುಂಡುಹಾಕಿ, ರೈಲಿಗೆ ಹೋಗ್ತೀನಪ್ಪಾ! ಅಮ್ಮಾವ್ರು ಸವಾರಿ ಎಂದು ಹೊರಟೇಬಿಟ್ಟ.

ನಮಗೆಲ್ಲಾ ಆಶ್ಚರ್ಯ. ಅಷ್ಟು ಜನಕ್ಕೂ ಜ್ಞಾಪಿಸು ಅಂತ ಕೊರವ ಹೇಳಿದ್ದನೇ? ಎಂದು. ಕಡೆಗೆ ಆ ಸೇವಕರನ್ನು ಕರೆದೆವು. ಯಾಕೆ ಈ ಸುದ್ದಿ ಕೊರವನಿಗೆ ಹೇಳಿದಿರಿ ಎಂದೆವು. ಮೂವರೂ ಒಂದೊಂದು ಮದ್ರಾಸಿನಿಂದ ಬಂದ ಕಾಗದ

ತೋರಿಸಿದರು. ಬೆಂಗಳೂರಿನ ಇಂತಹಾ ಕ್ಲಬ್ಬಿನ ಸೇವಕ ಅಂತೋನಿ, ರಾಮ್ಸ್ವಾಮಿ, ಕಾರಕೂನ ಎಂಬ ವಿಳಾಸಗಳಿಗೆ ಬಂದಿದ್ದ ಕಾರ್ಡುಗಳು. "ಶನಿವಾರ ರಾತ್ರೆ ಕೊರವನಿಗೆ ಸುಮಾರು ಎಂಟು ಗಂಟೆಗೆ ಮದ್ರಾಸ್ ರೈಲು ಎಂಟೂವರೆಗೆ ಬರುತ್ತೆ ಅಂತ ಜ್ಞಾಪಿಸಿ" ಎಂದು ಹೆಣ್ಣಕ್ಷರದಲ್ಲಿ ಒಕ್ಕಣೆ ಇತ್ತು. ಆಗ ನಮಗೆಲ್ಲಾ ಜ್ಞಾನೋದಯ. ಕೊರವನ ಹೆಂಡತಿಯ ಮುಂಜಾಗ್ರತೆ ಬಲು ಸೂಕ್ಷ್ಮ ಎಂದು ತಿಳಿಯಿತು.

* * *

ಮಳೆ ಜೋರಾಗಿ ಬೀಳುತ್ತಿತ್ತು ಬುಧವಾರ ಸಾಯಂಕಾಲ ಎಂಟು ಗಂಟೆಯ ಹೊತ್ತಿನಲ್ಲಿ. ಮಳೆ ನಿಂತ ಮೇಲೆ ಮನೆಗೆ ಹೋಗೋಣ ಎಂದು ಆರೇಳು ಜನ ವರಾಂಡಾದಲ್ಲೇ ಕೂತಿದ್ದೆವು. ಯಥಾಪ್ರಕಾರ ಕೊರವ ಅಧ್ಯಕ್ಷ. ಆದರೆ ಅಸೆಂಬ್ಲಿ ಅಧ್ಯಕ್ಷರಂತೆ ಮಾತನಾಡದೆ ಸುಮ್ಮನಿದ್ದ. ಆ ವೇಳೆಗೆ ನಮ್ಮ ಡಾಕ್ಟರು ಕ್ಲಬ್ಬಿಗೆ ಮಳೆಯಲ್ಲೇ ಮೋಟಾರಿನಲ್ಲಿ ಬಂದಿಳಿದರು. ಒಳಕ್ಕೆ ಬಂದರು. ನಗುನಗುತ್ತಿದ್ದರು.

"ಏನು ಡಾಕ್ಟರೇ ಇಷ್ಟು ಖುಷಿ, ಈಗೇನು ಬಂದಿರಿ, ಎಂದೂ ಈ ಹೊತ್ತಿನಲ್ಲಿ ಬಾರದವರು ಇಂದು ಬರಲು ಕಾರಣ" ಎಂದು ಏಳು ಗಂಟಲುಗಳು ಒಟ್ಟಿಗೇ ಕೇಳಿದುವು.

ಡಾಕ್ಟರು ಉತ್ತರಿಸಬೇಕು. ಅಷ್ಟರಲ್ಲೇ ಕೊರವ ಶುರುಮಾಡಿದ. "ನಗದೇ ಏನುಮಾಡ್ತಾರೆ ಡಾಕ್ಟರು. ಈ ಎಸ್ಟೇಟ್ ಡ್ಯೂಟಿ ಬಿಲ್ ಬರುತ್ತೆ. ಎಂದು ದೇಶಮುಖ್ ಪ್ರಜಾಸಭೆಯಲ್ಲಿ ಎಂದು ಹೇಳಿದರೋ ಅಂದಿನಿಂದ ಹಣವಿದ್ದ ಹೋತಗಳಿಗೆಲ್ಲಾ ಅದೇಯೋಚನೆ. ಹೇಗೆ ದೇಶಮುಖ್‌ಗೆ ಚಳ್ಳೆಹಣ್ಣು ತಿನ್ನಿಸುವುದು ಎಂದು. ಈ ಯೋಚನೆ ಪರಿಹಾರವಾಗದೆ ಇಲ್ಲಿ ತಲೆನೋವು ಅಲ್ಲಿ ಎದೇನೋವು, ಈಗ ನಾಡಿ ಹೆಚ್ಚು ಕಡಿಮೆಯಾಗಿದೆ ಆಗ ಹೊಟ್ಟೆ ಲಬೋ ಲಬೋ ಎಂದು ಸಂಕಟಪಡುತ್ತದೆ ಇವೆಲ್ಲಾ ಹೆಚ್ಚಾಗಿವೆ. ಅಂದ ಮೇಲೆ ಡಾಕ್ಟರಿಗೆ ಕೆಲಸ ಹೆಚ್ಚು ಸಂಪಾದನೆ ಹೆಚ್ಚು ದೇಶಮುಖ್‌ಗೆ ಹೋಗಬೇಕಾದ ದುಡ್ಡಿನಲ್ಲಿ ಸ್ವಲ್ಪ ಭಾಗ ಡಾಕ್ಟರಿಗೆ ಬರುತ್ತಿದೆ. ಅದಕ್ಕೇ ಡಾಕ್ಟರು ನಗು ನಗುತ್ತಿದ್ದಾರೆ. ಇಲ್ಲದ ಖಾಯಿಲೆಗೆ ಇರೋ ಹಣ ಸುರಿದರೆ ಡಾಕ್ಟರಿಗೆ (ಇಲ್ಲೇ) ಸ್ವರ್ಗವಲ್ಲವೇನ್ರೋ?" ಎಂದು ಕೇಳಿದ.

ನಾವೆಲ್ಲಾ ಡಾಕ್ಟರ ಕಡೆಗೆತಿರುಗಿದೆವು.

ಆತ ನಗುವನ್ನು ಮುಂದುವರಿಸುತ್ತಾ ಹೇಳಿದ "ಕೊರವನಿಗೆ ಇದು ಹೇಗೆ ಗೊತ್ತಾಯಿತೋ ಭಗವಂತನಿಗೇ ತಿಳಿಯಬೇಕು. ಆದರೆ ಈ ದಿನ ಮಧ್ಯಾಹ್ನದಿಂದ ಇಷ್ಟು ಹೊತ್ತಿನ ತನಕ ಈ ದುಡ್ಡಿನವರ ಕತೆಗಳಲ್ಲೇ ಕರೆಗಳಲ್ಲೇ ಕಳೆದೆ. ಕೈ ತುಂಬಾ ಹಣವೇನೋ ಬಂತು ಆದರೆ ಬೇಜಾರೂ ಆಯಿತು. ಬೇಜಾರು ಕಳೆದು

ಕೊಳ್ಳೋಣ ಎಂದು ಕ್ಲಬ್ಬಿಗೆ ಬಂದೆ. ಈ ಕೊರವ ದಿಟವಾಗಲೂ ಜ್ಯೋತಿಷ್ಕ ನಾಗಿದ್ದರೆ ಬದುಕಿ ಹೋಗುತ್ತಿದ್ದ." ಎಂದು.

ಆ ವೇಳೆಗೆ ಮಳೆ ನಿಂತಿತು. ಎಲ್ಲರೂ ಕೊರವನ ಹಿಂದೆ ಕ್ಲಬ್ಬಿನಿಂದ ಹೊರ ಬಿದ್ದೆವು.

*   *   *

ಪೂರ್ವದಲ್ಲಿ ಸೂರ್ಯ ಮುಳುಗಿದರೂ ಮುಳಗಬಹುದು. ನವತರುಣಿ ಉಹ್ಞೂ ಎಂದಾಗ ಮನಸ್ಸೂ ಉಹ್ಞೂ ಎಂದಿರಬಹುದು. ರಾಜ ಕಾರಣಿ ಚುನಾವಣೆಯ ಕಾಲದಲ್ಲಿ ಸತ್ಯವನ್ನೇ ನುಡಿಯಲೂ ಸಾಧ್ಯ.

ಆದರೆ ಕೊರವ ಕೊನೆಯ ಮಾತಾಡವೆ ಯಾರು ಏನೋ ಹೇಳಿದ್ದಕ್ಕೆ ಕೊನೆಯ ಕುಹಕದ ಕೊಂಕಿಡದೆ ಇರುವುದು ಅಸಾಧ್ಯ.

ಆ ಅಸಾಧ್ಯದ ಮೋಜೂ ಮಂಗಳವಾರ ಕ್ಲಬ್ಬಿನಲ್ಲಿ ನಡೆದೇ ಹೋಯಿತು.

ನಮ್ಮ 'ಘಟು' ಅಂದರೆ ಘಟೋತ್ಕಜನಿಗೆ ಮುದ್ದು ಹೆಸರು, ಅವ ದೈನಂದಿನ ಪತ್ರಿಕೆಯನ್ನು ಓದುತ್ತಿದ್ದ. ಅದರಲ್ಲಿಯೇ ಮಗ್ನನಾಗಿದ್ದ. ಒಮ್ಮೆಲೇ ಬಿಸುಸುಯ್ದು "ಅಯ್ಯೋ!" ಎಂದ. ಸುತ್ತಲಿದ್ದ ನಾವೆಲ್ಲಾ ಹಠಾತ್ತಾಗಿ "ಯಾಕಪ್ಪಾ ಏನು ಬೇನೆಬಂತೋ ನಿನಗೆ ನಾವೆಲ್ಲಾ ಮೊದಲು ಸತ್ತು, ನಮ್ಮ ಹೆಣಗಳನ್ನೆಲ್ಲಾ ನೀನೆ ಸಾಗಿಸುತ್ತಿ ಎಂದು ಆಶೆಯಾಗಿದ್ದೆವು. ನಿನಗೇ ಏನಾಯ್ತು?" ಎಂದು ಕನಿಕರದಿಂದ ಕೇಳಿದೆವು. ಕೊರವ ಕೂಡ ನಮ್ಮ ಜತೆಗೂಡಿ "ಯಾಕೆ? ಘಟು, ಡಾಕ್ಟರಿಗೆ ಪೋನು ಮಾಡಲೇ" ಎಂದ

ಘಟು ಹೇಳಿದ. "ಪೇಪರಿನಲ್ಲಿ ಸುದ್ದಿ ಓದಲಿಲ್ಲವೇ ನೀವು ಯಾರೂನು, ಈಗತಾನೆ ಇಂದಿನ ಪತ್ರಿಕೆ ಓದುವ ವ್ಯವಧಾನ ನನಗೆ ದೊರಕಿತು. ಮಧ್ಯ ಅಂತರಿಕ್ಷದಲ್ಲಿ ವಿಮಾನ ಅಪಘಾತಕ್ಕೀಡಾಗಿ ಇದ್ದವರೆಲ್ಲ ಭಸ್ಮೀ ಭೂತರಾದರು ಎಂದು ಸುದ್ದಿಬಂದಿದೆ. ಪಾಪ! ಹೊಟ್ಟೆ ಪಾಡಿಗಾಗಿ ಕಂಡವರಸೇವೆ ಮಾಡಲು ಉದ್ಯೋಗಕ್ಕೆ ಸೇರಿಕೊಂಡ ಅಂತರಿಕ್ಷದ ಅಪ್ಸರೆ Air hostess ಅವಳು ಅನ್ಯಾಯವಾಗಿ ಬೆಂದು ಹೋದಳಲ್ಲಾ ಎಂದು ನನ್ನ ಅರಿವಿಲ್ಲದೇ ನನ್ನ ಆತ್ಮ 'ಅಯ್ಯೋ!' ಎಂದು ಕೇಳಿಸುವಂತೆ ಕೂಗಿತು. ಮಿಂಚು ಹೊಡೆದು ವಿಮಾನ ಅಪಘಾತಕಕ್ಕೀಡಾಯಿತು. ಎಂದು ಸಲಹೆ ಬಂದಿದೆ. ಈ ವಿಮಾನಕರ್ತರು ಮಿಂಚು ಸೆಳೆವ ಕಂಬಿಗಳನ್ನು ಏಕೆ ಉಪಯೋಗಿಸುವುದಿಲ್ಲವೋ ದೇವರೇ ಬಲ್ಲ" ಎಂದ.


ಎತ್ತರವಾದ ಮನೆಗಳಿಗೆ ಮಿಂಚಿನ ಹಾವಳಿ ಆಗದಿರಲೆಂದು ಮಿಂಚು ಸೆಳವ ಕಬ್ಬಿಣದ ಕಂಬಿಗಳನ್ನು ಹಾಕಿ ನೆಲದೊಳಕ್ಕೆ ಹೂಳುವುದು ವಾಡಿಕೆ. ಅದನ್ನು ವಿಮಾನಕ್ಕೆ ಹೇಗೆ ತಗುಲಿಸುವುದೋ ಬ್ರಹ್ಮನೇ ಬಲ್ಲ. ಆದರೂ ವಿಜ್ಞಾನಿ ಘಟು ಉದ್ರೇಕಗೊಂಡು ಸಲಹೆ ಇತ್ತಿದ್ದ.

ಈ ಸಲಹೆಗೆ ಮರುಮಾತೇನು ಬಂತು!

ಕೊರವ ಒಮ್ಮೆಗೆ ನಿಶ್ಶಬ್ದದಿಂದ ನಾಲಿಗೆಯನ್ನು ಹಲ್ಲಿನಹಿಂದೆ ಭದ್ರವಾಗಿರಿಸಿ, ಸೊಂಟವನ್ನು ಬಗ್ಗಿಸಿ, ಹೊರಕ್ಕೆ ಚಪ್ಪಲಿಯ ಶಬ್ದವೂ ಕೇಳಿಸದಂತೆ, ನಿಶ್ಶಬ್ದವಾಗಿ ಹೊರಟೇ ಹೋದ.

ನಾವೆಲ್ಲಾ ಅವನನ್ನು ಅನುಸರಿಸಿದೆವು.

— o —



ರಾಯರೇ! ನಿಮ್ಮ ನಕ್ಷತ್ರವೂ ಆಧ್ರಪ್ರಾಂತ್ಯದ ಜನ್ಮ ನಕ್ಷತ್ರವೂ ಒಂದೇ ಆಗಿದೆ. ಅಂದಮೇಲೆ ನಿಮ್ಮ ಬಳ್ಳಾರಿ ಭವಿಷ್ಯ ಬಲು ಚೆನ್ನು. ನಿಮ್ಮ ಭವಿಷ್ಯಾನು ಸೊಗಸು.

" ಸರಿಗೆ ಮಗುಟ "

ಲಾಯರ್ ಹರಿಶ್ಚಂದ್ರರಾಯರು ಈ ಕಾಲದಲ್ಲೂ ಸಾಕ್ಷಾತ್ ಹರಿಶ್ಚಂದ್ರರೇ! ಉಣ್ಣುಕ್ಕೆ ತಿನ್ನುಕ್ಕೆ ಉಡುಕ್ಕೆ ತೊಡುಕ್ಕೆ ಸಾಕಷ್ಟು ಪಿತ್ರಾರ್ಜಿತ ಇದ್ದುದರಿಂದ " ಸತ್ಯಮೇವದೀಯತೆ ನಾನೃತಂ" ಎಂದು ಘೋಷಿಸಿ ಸುಳ್ಳು ಕೇಸುಗಳನ್ನು ಮುಟ್ಟುವುದೂ ಇಲ್ಲ ಎಂದು ಶಪಥಮಾಡಿದ್ದರು. ನಡೆಸಿಕೊಂಡೂ ಬರುತ್ತಿದ್ದರು. ಹಾಗೆ ಮಾಡಲೂ ಅವರಿಗೆ ಸಾಧ್ಯವಾಗಿತ್ತು.

ಕೊಳಕು ಹರಿದ ಬಟ್ಟೆಯನ್ನು ಧರಿಸಿದ ಕೊಂಗರವನೊಬ್ಬ ಮೂರುವಾರದ ಗಡ್ಡದೊಂದಿಗೆ ಲಾಯರ ಆಫೀಸಿಗೆ ಬಂದ. " ಸ್ವಾಮಿ ಲಾಯರೇ! ಭಿಕ್ಷೆಬೇಡಿ, ಕೂಲಿಮಾಡಿ, ಸಾಲಿಮಾಡಿ ಜೀವನ ಹೊರೆಯುವ ಜಾತಿ ನಂದು. ದೊಡ್ಡ ರಸ್ತೆ ರಾಮರಾಯರು ಒಂದು ದಿನವೆಲ್ಲಾ ತೋಟದ ಕೂಲಿಮಾಡಿಸಿ ಎಂಟಾಣೆ ಕೊಡುತ್ತೇನೆಂದು ಹೇಳಿದ್ದವರು ಆರೇ ಆಣೆ ಬಿಸಾಕಿದರು. ನಾನು ಅವರ ಮೇಲೆ ಇನ್ನೆರಡಾಣೆಗೆ ರೇಗಿಬಿದ್ದೆ. ಅವರೂ ತುಂಬಾ ರೇಗಿ ಒದ್ದೋಡಿಸಿದರು. ಆ ಮೇಲೆ ಅವರ ಮನೆಯಲ್ಲಿ ಸರಿಗೆ ಮುಗುಟ ಕಳುವಾಯಿತು ಅಂತ ನನ್ನ ಮೇಲೆ ಪೋಲೀಸಿಗೆ ದೂರು ಕೊಟ್ಟರು. ನೀವು ನನ್ನನ್ನು ಉದ್ಧಾರಮಾಡಬೇಕು " ಎಂದು ಲಾಯರಿಗೆ ದೂರದಿಂದಲೇ ಸಾಷ್ಟಾಂಗ ನಮಸ್ಕಾರ ಹಾಕಿದ.

ಲಾಯರ ಮನಸ್ಸು ಕರಗಿತು. ಕೊಂಗರವ ಲೋಹಿತಾಶ್ವನ ಹಾಗೆ ಅವರ ಕಣ್ಣಿಗೆ ಕಾಣಿಸಿತು. " ಆಗಲಿ ಕಣೋ! ಆದರೆ ನ್ಯಾಯಾಸ್ಥಾನಕ್ಕೆ ಬರುವಾಗ ಶುಭ್ರವಾದ ಬಟ್ಟೆ ಧರಿಸಿ, ನಿರ್ಮಲವಾಗಿ, ಸ್ನಾನಮಾಡಿ, ಕ್ಷೌರಮಾಡಿಸಿಕೊಂಡು ಬಾ. ಇಲ್ಲದಿದ್ದರೆ ಕೊಳಕುಬಟ್ಟೆಯ ನಿನ್ನ ಮೊಗವನ್ನು ನೋಡಿಯೇ ನ್ಯಾಯಾಧೀಶರು ನೀನು ಕಳ್ಳ ಎಂದೆನ್ನುತ್ತಾರೆ." ಎಂದು ಅಭಯವಿತ್ತರು.

ಆ ದಿನ ನ್ಯಾಯಾಸ್ಥಾನದಲ್ಲಿ ಮಧ್ಯಾಹ್ನ ಮೂರು ಗಂಟೆಗೆ ಕೊಂಗನ ಮೇಲಿನ ಮೊಕದ್ದಮೆ. ಕೊಂಗನು ಕ್ಷೌರಮಾಡಿಕೊಂಡು " ಅಪರಾಧಿಯ ಪೆಟ್ಟಿಗೆ"ಯಲ್ಲಿ ನಿಂತಿದ್ದಾನೆ. ಮುಕ್ಕಾಲು ಮೈ ಆ ಪೆಟ್ಟಿಗೆಯಿಂದ ಮುಚ್ಚಿದೆ. ಶುಭ್ರವಾಗಿದ್ದಾನೆ. ಹಣೆಗೆ ವಿಭೂತಿ ಬಳಿದುಕೊಂಡಿದ್ದಾನೆ.

ಪೋಲೀಸಿನವರು ತಮ್ಮ ಅಹವಾಲನ್ನು ಹೇಳಿ ಮುಗಿಸಿದರು. ನ್ಯಾಯಾಧೀಶರು ಅರೆ ನಿದ್ರೆಯಲ್ಲಿ ಲಾಯರ್ ಹರಿಶ್ಚಂದ್ರರಾಯರ ಕಡೆ ನೋಡಿದರು.

ಲಾಯರು ಹರಿಶ್ಚಂದ್ರರಾಯರು ಮುಕ್ಕಾಲು ತಾಸು ವಾದಿಸಿದರು. ತಮ್ಮ ಕಕ್ಷಿಗಾರ ಹೇಗೆ ದೇವಭಕ್ತನೆಂದೂ, ಕರ್ಮಯೋಗಿಯೆಂದೂ, ಹಣದ ಆಸೆ ಕಳೆದ ಬೈರಾಗಿಯೆಂದೂ, ಅಂದಿನ ಆಹಾರಕ್ಕೆ ಆ ದಿನ ದುಡಿವನೆಂದೂ ಮುಂದಿನ ಚಿಂತೆಯನ್ನು ಚಂದ್ರಚೂಡಶಿವಶಂಕರನಿಗೆ ಬಿಟ್ಟಿರುವನೆಂದೂ ಅಮೂಲಾಗ್ರವಾಗಿ ತಿಳಿಸಿದರು.

ನ್ಯಾಯಾಧೀಶರಿಗೆ ಈಗ ಪೂರ್ಣ ಎಚ್ಚರ. ಲಾಯರ್ ಹರಿಶ್ಚಂದ್ರರಾಯರು ಹೇಳಿದ ಗೀತಾವಾಕ್ಯಗಳು ಅವರನ್ನೆಬ್ಬಿಸಿದ್ದುವು. ಅವರು ಈ ವಾದವನ್ನೆಲ್ಲಾ ಕೇಳಿ ಮಧ್ಯಾಹ್ನ ನಾಲ್ಕುಮುಕ್ಕಾಲು ಗಂಟೆಯ ಹೊತ್ತಿಗೆ "ಕೊಂಗರವನು ನಿರಪರಾಧಿ— ಇಲ್ಲವಾದರೆ ಲಾಯರ್ ಹರಿಶ್ಚಂದ್ರರಾಯರು ಅವನ ಮೊಕದ್ದಮೆಯನ್ನೇ ಹಿಡಿಯುತ್ತಿರಲಿಲ್ಲ" ಎಂದು ತೀರ್ಪುಕೊಟ್ಟರು.

ಕಾವಲಿದ್ದ ಪೋಲೀಸಿನವನು ಕೊಂಗನಿಗೆ ಹೇಳಿದ "ನೀನು ಖುಲಾಸೆಯಾದೆ. ಹೊರಗೆ ಬಾ" ಎಂದ. ಕೊಂಗರವ ಕೂಗಿಯೇ ಬಿಟ್ಟ. "ನ್ಯಾಯಮೂರ್ತಿಗಳು ಇನ್ನೂ ಕೂತಿರುವಾಗಲೇ ನಾನು ಹೊರಗೆ ಬರಬಹುದೇ, ನಿನಗೆ ಮರ್ಯಾದೆ ಗೊತ್ತಿಲ್ಲವೇ" ಎಂದು.

ನ್ಯಾಯಮೂರ್ತಿಗಳಿಗೆ ಇದನ್ನು ಕೇಳಿ ಬಲು ಹಿಗ್ಗಾಯಿತು. ಅವರು ನ್ಯಾಯಾಸ್ಥಾನದ ಕೆಲಸ ಮುಗಿಯಿತು ಎಂದು ಸೂಚನೆ ಇತ್ತು ತಮ್ಮ ಗುಪ್ತನಿವಾಸಕ್ಕೆ ಹೊರಟರು.

ಲಾಯರ್ ಹರಿಶ್ಚಂದ್ರರಾಯರಿಗೆ ಆಶ್ಚರ್ಯ. ಕೊಂಗನ ಹತ್ತಿರ ಬಂದು "ಖುಲಾಸೆಯಾದೆ, ಯಾಕೆ ಹೊರಗೆ ಬರಲಿಲ್ಲ" ಎಂದರು.

ಕೊಂಗರವನಂದ "ನೀವು ಹೇಳಿದ್ದಿರಿ ಸ್ವಾಮಿ ಶುಭ್ರವಾಗಿ ಬಾ ಎಂದು. ಇದ್ದಿದುದು ಒಂದೇ ಸರಿಗೆ ಮುಗುಟ, ನನ್ನ ಹತ್ತಿರ. ಅದನ್ನೇ ಉಟ್ಟುಕೊಂಡು ಮಡಿಯಾಗಿ ದೇವಸ್ಥಾನಕ್ಕೆ ಹೋಗುವಂತೆ ನ್ಯಾಯಾಸ್ಥಾನಕ್ಕೆ ಬಂದಿದ್ದೆ. ನ್ಯಾಯಾಧಿಪತಿಗಳು ಖುಲಾಸೆ ಮಾಡಿದಾಗ ಆ ಅಪರಾಧಿ ಪೆಟ್ಟಿಗೆ ಬಿಟ್ಟು ಹೊರಕ್ಕೆ ಬಂದಿದ್ದರೆ ಈ ಸರಿಗೆ ಮುಗುಟ ಅವರಿಗೆ ಕಾಣಿಸಿದ್ದರೆ, ನನಗೇ ಕಷ್ಟ ಎಂದು ಊಹಿಸಿ ಅವರು, ಹೊರಗೆ ಹೋಗುವತನಕ ಇಲ್ಲೇ ಇರೋಣ ಎಂದುಕೊಂಡೆ" ಎಂದ.

ಲಾಯರ್ ಹರಿಶ್ಚಂದ್ರರಾಯರು ಕೊಂಗನನ್ನು ನೋಡಿದರು. ಅವನುಟ್ಟ ಮುಗುಟವನ್ನೂ ನೋಡಿದರು ರುಮಾಲು ತೆರೆದುಕೊಳ್ಳುತ್ತಾ ಹೇಳಿದರು "ನೀನೊಬ್ಬನೇ ಇಷ್ಟು ದಿನಕ್ಕೆ ನ್ಯಾಯಾಸ್ಥಾನ ದೇವಸ್ಥಾನದ ಹಾಗೆ ಅಂತ ಮಡಿಯಾಗಿ ಬಂದವ. ಅದಕ್ಕೇ ದೇವರು ನಿನ್ನನು ಉದ್ಧಾರಮಾಡಿದ" ಎಂದು.

ಪ್ರೋಹೆ

ತುಕ್ಕ–ಥಾಕ್ಕ–ನಕ್ಕ, ತುಕ್ಕ–ಥಾಕ್ಕ–ನಕ್ಕ, ತುಕ್ಕ–ಥಾಕ್ಕ–ನಕ್ಕ! ಹೋಗ್ತಾ ಇತ್ತು, ರೆಯಿಲು, ಕೊನೇ ಗಾಡಿ ಪಕ್ಕದ ಗಾಡಿ ನಮ್ಮದು. ೩೦, ೩೫ ಜನ, ಆಬಾಲ ಗೋಪಾಲ, ಸ್ತ್ರೀ ಪುರುಷರಾದಿಯಾಗಿ, ಅರೆನಿದ್ದೆ, ಹಗಲು ಹೊತ್ತು, ಎರಡೂವರೆ ಗಂಟೆ.

ಸರಕ್ಕನೆ ಗಾಡಿ ನಿಂತಿತು. ಯಾವುದೋ ಒಂದು ಕಟ್ಟಿಂಗ್‌ನಲ್ಲಿ ಹಿಂದಿನ ಅರ್ಧ ತಿರುವಿನಾಚೆ ಮೈದಾನ. ಕತ್ತನ್ನ ಎಷ್ಟು ನೀಡಿದರೂ, ಎಂಜಿನ್ ಕಾಣಿಸುತ್ತಿರಲಿಲ್ಲ. ಏಕೆ ನಿಂತಿತು, ಎಂದು ಪತ್ತೆ ಹಚ್ಚುವುದೇ ಕಷ್ಟವಾಗಿತ್ತು. ಇಳಿಯಲು ಭಯ, ಎಲ್ಲಿ ಮತ್ತೆ ಸರಕ್ಕನ ಹೊರಟು ಬಿಡುತ್ತದೋ ರೈಲು, ಎಂಬ ಭಯ.

ನಿದ್ದೆ ಹೋಯ್ತು, ಎಲ್ಲರಿಗೂ, ನಾಲಗೆಗಳು ಸಡಿಲವಾದುವು.

ಯಾವುದೋ ಎಮ್ಮೆ ಅಡ್ಡ ಬಂದಿರಬೇಕು, ಎಮ್ಮೆಗಳು ಹಾಳು ಎಂಥ ಎಂಜಿನಿಗೂ ದಾರಿಕೊಡುವುದಿಲ್ಲ, ರೈಲ್ವೆ ಲೈನ್ ಎರಡುಕಡೆಗೂ ಉದ್ದಕ್ಕೂ ಸೊಗಸಾದ ಬೇಲಿ ಹಾಕಲೇಬೇಕು....ಆತ್ಮಹತ್ಯೆಗೆ ಯಾವನೋ ಪಾಪಿ ಕಂಬಿಕಚ್ಚಿಕೊಂಡು ಮಲಗಿರಬೇಕು, ಈಚೆಗೆ ಇಂಥ ಸಾವು ಹೆಚ್ಚಾಗಿದೆ; ಹಗಲಲ್ಲೇ ಪ್ರಾಣಬಿಡುತ್ತಾರೆ, ಇದು ಬರಗಾಲ, ಮಳೆ ಬೆಳೆ ಇಲ್ಲದ ಸೀಮೆ....ಇಲ್ಲ, ಇಲ್ಲ, ಅಲ್ಲಲ್ಲೇ ಹೀಗೆ ಗಾಡಿನಿಲ್ಲಿಸಿ, ಟಿಕೀಟಿಲ್ಲದವರನ್ನ ನಡುಮಧ್ಯೆ ಇಳಿಸುತ್ತಾರಂತೆ, ಅದಕ್ಕೋಸ್ಕರ ನಿಲ್ಲಿಸಿರಬೇಕು, ನೋಡಿ, ಅಲ್ಲಿ, ಒಬ್ಬ ಆ ಸಣ್ಣ ಕೋಣೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡ, ಅವರಿಗೆ ಗೊತ್ತು ಅದರ ಸುಳುವು....ಮುಂದಿನ ಸ್ಟೇಷನ್ ಕೈಮರ ಬಿದ್ದಿಲ್ಲವೋ ಏನೋ ....ಗಾಳಿಗೆ ಯಾವುದಾದರೂ ಮರ ಅಡ್ಡ ಬಿದ್ದಿದೆಯೋ ಏನೋ....ಎಂಜಿನ್ ನಡೆಸುವವನ ಮನೆಯೋ ನಂಟರಮನೆಯೋ ಲೈನ್ ಪಕ್ಕದಲ್ಲಿರಬೇಕು, ಅವರಿಗೇನಾದರೂ ಕೊಟ್ಟುಬರ್ತಾನೆ, ಪುಣ್ಯಾತ್ಮ, ಈಚೆಗೆ, ಇವೆಲ್ಲ ಅವರಿಗೆ ತೋರಿದ ಹಾಗೆ; ಹೇಳೋದಿಲ್ಲ, ಕೇಳೋದಿಲ್ಲ....ಮುಂದೆ ಗೂಡ್ಸ್‌ಗಾಡಿ ಮುಗುಚಿರಬಹುದು....ಮಂತ್ರಿಗಳನ್ನ ಬೆದರಿಸುವುದಕ್ಕಾಗಿ ಯಾರಾದರೂ ಬಂಡೆ ಇರಿಸಿರಬಹುದು....ಮೊಳೆ ಹೊಡೆದಿರ

ಬಹುದು....ಕಂಬಿ ಕಿತ್ತಿರಬಹುದು....ಕೆಂಪು ಬಾವುಟ ಬೀಸಿರಬಹುದು....ಇಲ್ಲ, ರಸ್ತೆ ರಿಪೇರಿ ನಡೆಯುತ್ತಿರಬಹುದು... ಸೇತುವೆ ಅಪಾಯವೋ ಏನೋ....ಇಲ್ಲಿಂದಾಚೆಗೆ ಪ್ಲೇಗು ಕಾಲರಾ ಜಾಡ್ಯ ಅಂತ ಇಂಜೆಕ್ಷನ್ ಕೊಡುವುದಕ್ಕೊ ನಿಲ್ಲಿಸುತ್ತಾರಂತೆ, ಪುರಿ ಜಗನ್ನಾಥ ಮುಂತಾದಕಡೆ, ಅಡ್ಡವಾಗಿ ಜನ ಮಲಗಿದಾರೋ ದನ ಮಲಗಿಸಿದಾರೊ, ರೈಲಿಗೇನಾದರೂ ದಾರಿ ತಪ್ಪಿ ಆತ ಮತ್ತೆ ಹಿಂದಕ್ಕೆ ತಿರುಗಿಸುತ್ತಾನೋ ಏನೋ, ಎಂಜಿನ್ ಕೆಟ್ಟುಹೋಗಿರಬಹುದು, ಎಣ್ಣೆ ಇಂಗಿರಬಹುದು, ಮಣ್ಣು ಹೂತಿರಬಹುದು, ೩೦, ೩೫ ಜನ ನೂರಿನ್ನೂರು ತರಹ ಊಹಿಸಿದರು. ರೈಲಿಂದಲೇ ಯಾರೋ ಬಿದ್ದರೆಂದರು, ಯಾವುದೋ ಬಿತ್ತೆಂದರು, ಯಾರೋ ಸರಪಳಿ ಹಿಡಿದೆಳೆದು ನಿಲ್ಲಿಸಿರಬಹುದೆಂದರು.

ಆಗ, ಇಬ್ಬರು ಮೂರು ಗಂಟು ಮೂಟೆ ಹೊತ್ತು ನಮ್ಮ ಡಬ್ಬಿ ಬಾಗಿಲು ತೆರೆದು ಒಳಕ್ಕೆ ನುಗ್ಗಿದರು. ಅವರನ್ನು ಕೇಳಿದೆವು. "ಹೇಯ್! ಇದು ಸ್ಟೇಷನ್, ರೀ! ನಮ್ಮೂರ್ರ್ರಿ!" ಎಂದರು.

ನಮ್ಮ ನಾಲಿಗೆಗಳುಡುಗಿದವು.

—ಪಾಟೀಲ.

ಇದೇನಲ್ಲ ಹೊಸಲಿಗೆ ಕೆಮ್ಮಣ್ಣು ಹಚ್ಚಿದರೆ ಎಷ್ಟು ಚೆನ್ನಾಗಿಕಾಣಿಸಬೇಕು ವರ್ಷಾವಧಿ ಹಬ್ಬ! ಇದೇನು ಹೀಗೆ ಮಣ್ಣು ಮೆತ್ತಿದೀಯಲ್ಲೇ-ನಾನು ಕೆಮಣ್ಣು ಹಚ್ಚಿ ತೋರಿಸುತ್ತೇನೆ ಎಂದು ಆತ ನಯವಾಗಿ ಕೆಮ್ಮಣ್ಣು ಹಚ್ಚಿದ ಹೊಸಲೆಲ್ಲಾ. ಗೆರಿಗಳು ತುಟಿಗೆ ರಂಗು ಹಚ್ಚುವಂತೆ ಮೂತಿ ಚೂಪ್ರ ಮಾಡಿಕೊಂಡು ಹಚ್ಚಿದ.

"ನೋಡೇ ಈಗ" ಎಂದು ಹೆಮ್ಮೆಯಿಂದ ಹೊಸಲಕೆಳಗೇ ತೂರಿದಂತೆ ಅಭಿನಯಿಸಿದ.

" ಏನು ಮಹಾ! " ಎಂದು ಆಕೆ. ಹೊಸಲಮುಂದೆ ರಂಗೋಲೀ ಇಟ್ಟಿಳು. ಮಲ್ಲಿಗೆ ಹೂವಿನ ಚಿತ್ರ. ದಿಟವಾಗಲೂ ಕಲಾಕೃತಿ. ಆಕೆ ಬಳುಕಿನಿಂತು ಇದು ನೋಡಿ ಎಷ್ಟು ನಾಜೂಕು ಎಂದು ರಂಗೋಲಿಯ ಕೆಳಗೆ ನುಸಿದವಳಂತೆಯೇ ನಟಿಸಿದಳು.

ಹಬ್ಬ ದಿಟವಾಗಲೂ ಹಬ್ಬ.

ಪಾಪ ಪಾಪ !!

ನನ್ನ ಅಂಗಿ ಜೇಬಿಂದ ನಾಲ್ಕಾಣೆಯನ್ನು ತೆಗೆಯಲು ಅವನು ಕೈ ಇಕ್ಕಿದ್ದನ್ನು ನೋಡಿಯೂ ನಾನು ಸುಮ್ಮನಿರುವುದು ಸಾಧ್ಯವೆ? ನಾಳೆಯಿಂದ ಕೆಲಸಕ್ಕೆ ಬರಬೇಡ ಎಂದು ಹೇಳಿ, ಅವತ್ತಿನವರೆಗಿನ ಸಂಬಳವನ್ನೂ ತೆತ್ತು, "ಹೋಗಿ ಬಾರಯ್ಯ" ಎಂದೆ.

ಜವಾನನಾದರೂ ಅವನು ತುಂಬ ವ್ಯಾಪಕಸ್ಥ. ನನ್ನ ಮೇಲೆ ಹಾಲಿನವನ ಹತ್ತಿರ, ಪೇಪರ್ ಕೊಡುವ ಹುಡುಗ, ಸೈಕಲ್ ರಿಪೇರಿ ಸಾಬಿ, ಟೈಲರ್ ಧೋಂಡೂ ಸಾ ಎಲ್ಲರ ಹತ್ತಿರವೂ ಚಾಡಿ ಹರಡಿದ. ಪಿಸಿಂಗೋಪಿ, ಜಿಪುಣ, ಹೆಂಡತಿಯನ್ನು ಹೊಡೆಯುವವನು, ಅತ್ತೆ ಮಾವಂದಿರ ಹತ್ತಿರ ಜಗಳ ಆಡಿದವನು, ತಮ್ಮನಿಗೆ ಅನ್ನ ಹಾಕದವನು, ಎಂದೆಲ್ಲ ದೂರಿದ.

ಅವಳ ವಿಷಯವಾಗಿಯೂ, ಅವನ ಹೆಂಡತಿ, ಕೆಲಸ ಮಾಡುತ್ತಿದ್ದ ಮನೆಗಳ ಹೆಂಗಸರ ಕಿವಿಯಲ್ಲಿ ವಿಷ ತುಂಬಿಸಿದ. ಅವರೆಲ್ಲರೂ ಅಲ್ಲಿ ಇಲ್ಲಿ ಗುಸ ಗುಸ ಪ್ರಾರಂಭ. "ನೋಡಿರಿ, ಹಾಗಂತೆ" "ಗಂಡನನ್ನೇ ಹೊಡೆಯುತ್ತಾಳಂತೆ" "ಕೈ ವಿಷ ಹಾಕ್ತಾಳಂತೆ" ಎಂದೆಲ್ಲ ಸುದ್ದಿ ಹರಡಿಸಿದರು.

ಆ ಹೆಂಗಸರ ಮೂಲಕ ನನ್ನ ಮೇಲಿನ ಅಪವಾದಗಳು ಅವರ ಪತಿಗಳಿಗೂ ಅವರು ಕೆಲಸಮಾಡುತ್ತಿದ್ದ ಕಚೇರಿವಲಯಗಳಿಗೂ ಹಬ್ಬಿದುವು. ಬಸ್ಸಲ್ಲಿ ಕೂತರೆ, ಲೈಬ್ರರಿಯಲ್ಲಿ ನಿಂತರೆ, ಹೋಟಲಿಗೆ ನುಗ್ಗಿದರೆ, ಆಫೀಸಲ್ಲಿ ಕಾಲಿಟ್ಟರೆ, ನನ್ನ ಮೇಲಿನ ಪಿಸುಪಿಸಗಳೇ ಆದುವು.

ಮೊದ ಮೊದಲು ನನಗೆ ಗೊತ್ತಾಗಲಿಲ್ಲ. "ಎಂಥವರಿಗೂ ತಪ್ಪಿದ್ದಲ್ಲ, ಸುಮ್ಮನಿರು" "ನಿಂದಕರಿರಬೇಕಿರಬೇಕು, ಹಂದಿಹಾಂಗ" ಎಂದು ಅವಳಿಗೆ ಹೇಳುತ್ತಿದ್ದೆ.

ಆ ಜವಾನನ ಮೇಲೆ ನನಗೆ ಅನುಮಾನ ಬರಲೇ ಇಲ್ಲ. ಏಕೆಂದರೆ ಅವನು ದಿನವೂ ನನ್ನೆದುರಿಗೆ ಸಿಕ್ಕಿ, "ಚಂದಾಗಿದೀರಾ, ಸ್ವಾಮಿ" ಎಂದು ಹಲ್ಲು ಕಿರಿಯುತ್ತಿದ್ದ. ತಾನು ಪಸರಿಸಿದ ವಿಷಗಾಳಿಯ ಸೋಂಕಿನಿಂದ ನಾನು ಅದುರಿ ಬರುತ್ತಿರುವುದನ್ನೆ ನೋಡಿ ಆನಂದ ಪಡುತ್ತಿದ್ದ, ಅವನು, ಅಂತ ನನಗೆ ನಂತರ ತಿಳಿಯಿತು.

ಇಂಥ ನೀಚರೂ ಉಂಟೆ, ಅಂತ ನಾನು ಮೂಗಿನ ಮೇಲೆ ಬೆರಳಿಟ್ಟೆ. ಒಂದು ದಿನ, ಅವನನ್ನ ನೇರವಾಗಿ ಬೈದೆ. "ನಾಲ್ಕಾಣೆ ಕದಿಯುವುದಕ್ಕೆ ನಾಚಿಕೆ ಆಗಿಲ್ಲ ವೇನೋ?" ಎಂದೆ. ಅವನು, "ನಾನು ನಿಮ್ಮ ನಾಲ್ಕಾಣೆ ಮುಖವನ್ನೇ ಕಾಣೆ" ಎಂದ. ಸಂಶೋಧನೆ ನಡೆಸಿದೆ. ಹೌದು! ಅವನು ಹೇಳಿದ್ದು ನಿಜ!

ಆ ದಿನ ನನ್ನ ಜೋಬು–ಖಾಲಿ! ಅವನ ಅಂದಿನ ಪ್ರಯತ್ನ, ನಿರರ್ಥಕ! ವೃಥಾ ಶ್ರಮ! ಅವನ ಆಸೆ, ಗಗನ ಕುಸುಮ. ನಿರಾಶೆಯ ನಿರಾಲಂಬಕೂಪದ ಕೂಗು, ಅವನ ಚಾಡಿ! ಕೈ ತೂರಿಸಿ, ನಾನು ಅವಲಕ್ಷಣ ಎಂದುಕೊಂಡೆಯಾ ಎಂದೆ.

ನನ್ನ ಮನ ಕರಗಿತು. ಅವನು ಮಾಡಿದ್ದು ನ್ಯಾಯ, ಎನಿಸಿತು. ೫ ರೂಪಾಯಿ ಹೆಚ್ಚು ಸಂಬಳ ಕೊಡುತ್ತೇನೆ, ಬಾ, ಎಂದೆ.

ಬೇಡಿ! ದಿನವೂ ನಾಲ್ಕಾಣೆ ನನಗಾಗಿ ನಿಮ್ಮ ಕಿಸೆಯಲ್ಲಿರಿಸಿ ನಿಮ್ಮ ಅಂಗಿಯನ್ನ ಕೋಣೆ ಗೋಡೆಗೆ ತೂಗು ಹಾಕಿ, ಸಾಕು, ಎಂದ. ತಥಾಸ್ತು, ಎಂದೆ.

—ರೇವಣ್ಣ.

ಎಲೆ ಪೆಜ್ಜೆ ರೂಪಿನಿಂದಲಿ
ಪೆಣ್ ಜಾತಿಗೆ ಸೇರ್ದೆನೆಂದು ಗರ್ವಿಸಬೇಡಾ!
ಒಲುಮೆಯು ನಿನ್ನಲ್ಲಿಹುದೇ
ಗಂಡನ ಹಿಡಿಯುವುದರೊಳಾಯ್ತು ನಿನ್ನಯ ಶೌರ್ಯಂ||

ಬಾಲ ರಾಜಕೀಯ

ಬೆಳೆಯುವ ಪೈರು ಮೊಳಕೆಯಲ್ಲೇ; ಇಂದು ಬಾಲಕ; ಮುಂದೆ ಸತ್ಪ್ರಜೆ; ಎಳೆಗರುಂ ಎತ್ತಾಗದೇ? (ತಕ್ಕಷ್ಟು ಮೇವು ಸಿಕ್ಕರೆ) ನ್ಯಗ್ರೋಧ ಬೀಜಂ ಕೆಲಂಸಿಡಿದುಂ ಪೆರ್ಮರನಾಗದೇ. ಇತ್ಯಾದಿ, ಇತ್ಯಾದಿ. ಇಂದಿನ ಶಾಲೆಯ ಹೈಕಳೇ ಮುಂದೆ ಸರಕಾರಿ ಸೆಕ್ರೇಟ್ರಿಗಳು. ಇಂದಿನ ಪೀಕಲೇ ನಾಳೆ P.Mಗ್ಳು. ಆದರೆ ತಕ್ಕಷ್ಟು ಶಿಕ್ಷಣ ದೊರೆಯಬೇಕಲ್ಲ. ನಮ್ಮದಿನ್ನೂ ಬಾಲಗಣರಾಜ್ಯ. ಅದಕ್ಕಾಗಿ ದೂರಾಲೋಚನೆಯುಳ್ಳ ಘನಸರಕಾರದವರು, ನವಬಾಲಕರಿಗೆ ನವ ಪಠ್ಯಪುಸ್ತಕದಲ್ಲಿ ನವನವೀನ ರಾಜಕೀಯವನ್ನು ನಯವರಿತು ಬೋಧಿಸಿದ್ದಾರೆಂಬುದನ್ನರಿತು, ಪೋಷಕರೇ, ತಂದೆ ತಾಯಿಗಳೇ ಆನಂದಿರಿಸಿ ಉದಾಹರಣೆಗಾಗಿ ಕನ್ನಡ ಒಂದನೆಯ ಪುಸ್ತಕದಲ್ಲಿ ೬೨ನೆಯ ಪುಟದಲ್ಲಿ ಎಂತಹ ರಾಜಕೀಯವಿದೆಯೆಂದು ಗಮನಿಸಿರಿ :—

ಒಬ್ಬ ರಾಜಕೀಯ ಮುಖಂಡರು (ಸಂತೆಯ) ಉದ್ಘಾಟನೆಮಾಡುತ್ತಾ ಉದ್ಘೋಷಣೆ ನಡೆಸಿದರು. ಅವರ ಪುಚ್ಛ ಬಲಿಯಿತು. ಸ್ವೇಚ್ಛೆಯಿಂದ ವಿಹರಿಸಿದರು. ಬಂದ ಸಂಭಾವನಾ ದ್ರವ್ಯದಿಂದ ಬಲಿಷ್ಠರಾದರು. ಎಲ್ಲರನ್ನು ಮುಟ್ಠಾಳರೆಂದು ಬೈದರು. ತಾವು ಅವರಿಗೆ ಜ್ಯೇಷ್ಠರೆಂಬುದು ಅವರಿಗೆ ತಿಳಿದಿರಲಿಲ್ಲ. ಷಷ್ಠಿ ದಿವಸ ಅಶ್ವತ್ಥ ಮರದ ಕೆಳಗೆ ಅವರು ಮಾಡಿದ ಭಾಷಣದಲ್ಲಿ ದೊಂಬಿಯೆದ್ದು ಅವರು ಅಶ್ವತ್ಥಾಮ (ಚಿರಂಜೀವಿ)ನನ್ನು ನೆನೆಯುತ್ತಾ ಓಡಿಬಂದು ಗೃಹಸ್ಥರಾದರು. ಆಸ್ಥಾನಕ್ಕೆ ಹೋಗಲಿಲ್ಲ. ಅವರು ಗೃಹಸ್ಥರಾದುದರಿಂದ ದೇಶ ಉದ್ಧಾರವಾಯಿತು. ಉದ್ಧರಣೆಯ ಗುಟುಕು ನೀರು ಕುಡಿದು ಸಿದ್ಧೇಶ್ವರನನ್ನು ನೆನೆದರೂ ನಿಷ್ಫಲವಾಯಿತು. ಮುಂದಿನ ಎಲೆಕ್ಷನ್ ಬಂತು. ಅವರಿಗೆ ಅದ್ಭುತ ದುಷ್ಫಲ ದೊರಕಿತು. ದುಡ್ಡು ಕಳೆದುಕೊಂಡು ಸೋತಮೇಲೆ ಅವರಿಗೆ ಸೋಲಿನ ಜ್ಞಾನ ಉದ್ಭವವಾಯಿತು. ಈಗಲೂ ಅವರಿಗೆ ಸೋಲಿನ ಜ್ಞಾಪಕ ಚೆನ್ನಾಗಿದೆ.

ಆಹಾ! ಎಂತಹ ಸೊಗಸಾದ ಸರಳವಾದ ರಾಜಕೀಯ ಭಾವಗೀತೆ.

[ಕೆಳಗೆ ಗೆರೆ ಎಳೆದಿರುವ ಶಬ್ದಗಳು ಪಾಠದಲ್ಲಿವೆ]

ನಿಮ್ಮವನೇ ಆದ,
ಎ. ಆರ್. ಸೇತೂರಾಮರಾವ್.

ಚಿಂತಿಸೋ ಎಲೆ ಮನುಜ!

ಆಶಾವಾದಿಗಳೆಂದುಕೊಳ್ಳುವವರಿದ್ದಾರಲ್ಲ—ಅವರಂತಾರೆ ಯಾಕೆ ಚಿಂತೆ ಹಚ್ಚಿಕೋತೀರಿ? ಅಂತ. ನಾನನ್ನೋದು ಹಾಗಲ್ಲ—"ಯಾಕೆ ಚಿಂತಿಸಬಾರದು?"—ಅಂತ. "ಯಾಕೆ ತಲೆ ಬಿಸಿಮಾಡಿಕೊಳ್ಳದೆ ಇರೋದು?"--ಅಂತ. ತಲೆ ಬಿಸಿ ಮಾಡಿಕೊಳ್ಳೋದಕ್ಕೆ ಈವಾಗ ಇರೋವಷ್ಟು ಸಂದರ್ಭ, ಸೌಲಭ್ಯ ಹಿಂದೆ ಯಾವ ಕಾಲದಲ್ಲಾದರೂ ಇತ್ತೆ? ಅಂದ ಮೇಲೆ ಯಾಕೆ ಅವುಗಳನ್ನು ಸದುಪಯೋಗ ಪಡಿಸಕೊಳ್ಳಬಾರದು ಅಂತೀನಿ, ಪ್ರತಿ ನಿತ್ಯ ಒಂದಷ್ಟು ಯೋಚನೆ ಹಚ್ಚಿಕೊಂಡು ತಲೆಕಾಯಿಯನ್ನ ಬೆಚ್ಚಗಿರಿಸೋದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಅಂತ ನಾನನ್ನೋದು ಮುಂದೆ ಎಂಥಾ ಕಾಲ ಬರುತ್ತೋ. ದಿನವೆಲ್ಲ ಚಿಂತಿಸುತ್ತಾ ಇರಬೇಕಾದ ಕಾಲವೇ ಬಂತು ಅಂದ್ಕೊಳ್ಳೋಣ. ಆ ಕಾಲಕ್ಕಾಗಿಯಾದರೂ ಈಗಾಗಲೇ ಸಿದ್ಧವಾಗಿರೋದು ಬೇಡವೆ?

ಬಸವಣ್ಣನವರು ಹೇಳಿದಾರೆ 'ತನ್ನ ಬಣ್ಣಿಸಬೇಡ' ಅಂತ. ಆದರೂ ಕ್ಷಮಿಸಿ. ಚಿಂತೆ ಹಚ್ಚಿಕೊಳ್ಳೋದರಲ್ಲಿ ನಾನು ನಿಸ್ಸೀಮ ಅಂತ ನಾಚ್ಕೆ ಇಲ್ದೇ ಹೇಳ್ಕೊಳ್ಳೋದನ್ನ ಕ್ಷಮಿಸಿ.

ಮೊದಲಾಗಿ ಹೇಳಿಬಿಡ್ತೀನಿ. ಚಿಂತೆಯ ಮಟ್ಟಿಗೆ ಈ ಹೊತ್ತು ಬೇಡ; ನಾಳೆ ನೋಡ್ಕೊಂಬೋಣ ಅನ್ನೋ ಮಾತು ಬಿಟ್ಟುಬಿಡಿ. ಅದು ಬೇಡವೇಬೇಡ. ಇವೊತ್ತು ಬೇಕಾದಷ್ಟು ಸುಖ ಇದೆ, ಸಂತೋಷ ಇದೆ, ತಮಾಷೆ ಇದೆ; ಯಾತಕ್ಕೆ, ಏನಾದರೂ ಯೋಚ್ನೆ ಹಚ್ಚಿಕೊಂಡು ಚಿಂತಿಸಬೇಕು ಅಂತ ಅಂದುಕೊಂಡಿರೋ—ನೀವು ಕೆಟ್ರಿ! ಕೆಟ್ರಿ ಅಂತೇನೆ! ನಾಳೆ ಮತ್ತೇನೋ 'ಮಜಾ' ಇರಬಹುದು. ಹೆಚ್ಚಿನ ಸುಖ ಇರಬಹುದು. ಸಂತೋಷ ಎಲ್ಲಿಂದಲೋ ಉಕ್ಕುಕ್ಕಿ ಬರಬಹುದು. ಹಾಗಾಗಿಬಿಟ್ಟರೆ ನಾಳೆ ನಿಮಗೆ ಚಿಂತಿಸೋದಕ್ಕೆ ಅವಕಾಶವಾದರೂ ಎಲ್ಲಿ ಸಿಗುತ್ತೇ ಆದ್ದರಿಂದ ನಾಳೆ ಅಂಬೋ ಮಾತು ಬೇಡ. ಚಿಂತಿಸೋದಿದ್ದರೆ ಇವೊತ್ತೇ ತೊಡಗಬೇಕು. 'ಶುಭಸ್ಯ ಶೀಘ್ರಂ' ನಾಳೆ ಕೂಡದು. ನನ್ನ ಡಿಕ್ಷನರಿಯಲ್ಲಿ 'ನಾಳೆ' ಎಂಬ ಶಬ್ದ ಇದ್ದರೂ ಚಿಂತಿಸೋದಕ್ಕೆ ತೊಡಗುವಾಗ ನಾನದನ್ನ ನೋಡೋದೇ ಇಲ್ಲ.

ಯಾರಾದರೂ ಅಂದಾರು. "ನೀನಿನ್ನೂ ಚಿಕ್ಕವನಯ್ಯ ಯಾತಕ್ಕೆ ಸುಮ್ಮನೆ ಬೇಡದಿದ್ದ ಯೋಚನೆ ಹಚ್ಚಿಕೊಂಡು ತಲೆ ಬಿಸಿ ಮಾಡಿಕೊಳ್ಳುತ್ತೀಯಾ"—ಅಂತ. ಬುದ್ಧಿ ಇಲ್ಲ ಅಂಥ ಜನಕ್ಕೆ! ಯೋಚ್ನೆ ಹಚ್ಚಿಕೊಳ್ಳೋದಕ್ಕೆ, ತಲೆ ಕೆರೆದುಕೊಳ್ಳೋ ದಕ್ಕೆ, ಚಿಕ್ಕವ್ರು—ದೊಡ್ಡವ್ರು ಅಂಬೋದಿಲ್ಲ. ಓಟಿಗೆ ಬೇಕಾದ ಹಾಗೆ ಮೆಜಾರಿಟಿ ಕೂಡ ಅಗತ್ಯವಿಲ್ಲ ಮುಖ್ಯವಾಗಿ ಯಾವ ತರದ ಚಿಂತೆ ನಿಮಗೆ ಹೊಂದಿಕೊಳ್ಳುತ್ತೆ ಅಂತ ನೋಡಿಕೊಂಡು ಚಿಂತಿಸೋದಕ್ಕೆ ತೊಡಗಿ. ಕೂಡಲೆ ತೊಡಗಿ ಆ ಮೇಲೆ ಅದೇ ನಿಮ್ಮನ್ನ ಗಟ್ಟಿಯಾಗಿ ಹಿಡಿಕೊಳ್ಳುತ್ತೆ. ನೀವದನ್ನ ಬಿಡ್ತೀನಿ ಅಂದರೂ ನಿಮ್ಮನ್ನದು ಬಿಡೋದಿಲ್ಲ.

ಒಮ್ಮೊಮ್ಮೆ ನೀವಂದುಕೊಳ್ಳಬಹುದು—ಏನೋ ಚಿಕ್ಕ ವಿಷಯ, ಯಾತಕ್ಕೆ ಇದಕ್ಕಾಗಿ ತಲೆ ಬಿಸಿಮಾಡಿಕೊಳ್ಳಬೇಕು ಅಂತ. ಹಾಗಿರೋದು ಚೆನ್ನಲ್ಲ. ಆ ಭಾವನೆ ತಪ್ಪು. ಚಿಕ್ಕ ವಿಷಯಾಂತ ಬಿಟ್ಟುಬಿಡೋದು ತಪ್ಪು. ಚಿಕ್ಕ ವಿಷಯಗಳೇ ಎಷ್ಟೋ ಸಲ ಟನ್‌ಗಟ್ಟಲೆ ಚಿಂತೆ ಕೊಡೋದಿದೆ.

ದೃಷ್ಟಾಂತಕ್ಕಾಗಿ ಹೇಳ್ತೀನೆ–ಸ್ನೇಹಿತರ ಹತ್ತಿರ ಕೊಂಚ ವಿವೇಚನೆಯಿಲ್ಲದೆ ವರ್ತಿಸಿದಿರಿ ಅಂತಿಟ್ಟುಕೊಳ್ಳೋಣ. ಅದೇನೋ ಚಿಕ್ಕ ವಿಷಯಾನೇ ಇರಬಹುದು, ನಮ್ಮ ಸ್ನೇಹಿತರು ಅದನ್ನು ಗಮನಿಸ್ದೇ ಇದ್ದಿರಬಹುದು. ಅಥವಾ ಕೂಡಲೆ ಅದನ್ನು ಮರೆತಿರಬಹುದು. ಆದರೆ ನೀವು ಮರೀಬೇಡಿ. ಪದೇ ಪದೇ ನಿಮ್ಮ ಪ್ರಮಾದ ವನ್ನ ಮನಸ್ನಲ್ಲಿ ಮುಗುಚಿಹಾಕ್ತಾ ಇರಿ. ಆ ತಪ್ಪು ಮೆಂತ್ಯದ ದೋಸೆ ಹಾಗೆ ಉಬ್ಬಿದ್ದು ಕಾಣಿಸುತ್ತೆ. ಯಾಕೆ ಪೂರಿ ಹಾಗೆ ಸಹಾ ಆಗುತ್ತೆ! ಮನಸ್ಸು ಎಣ್ಣೆ ಬಾಂಡ್ಲಿಯ ಹಾಗೆ ಕುದಿಯುತ್ತೆ. ಆಗ ಸೊಗಸಾಗಿ ಒಂದು ದಿನಾನೆಲ್ಲ ಕೆಡಿಸಬಹುದು.

ಅಥವಾ, ಯಾರಾದರೂ ಸ್ನೇಹಿತರು ಅಪ್ಪಿ ತಪ್ಪಿ ನಿಮ್ಮ ಮನಸ್ಸನ್ನ ಕೊಂಚ ನೋಯಿಸಿದರೂಂತ ಇಟ್ಟುಕೊಳ್ಳಿ ಅಷ್ಟೇನೆ ಸಾಕು. ಬೇಕಾದಷ್ಟು ಚಿಂತೆ ತಂದುಕೋ ಬಹುದು. ನಿಜವಾಗಲೂ ಹೇಳ್ತೀನೆ. ಸಂದರ್ಭ ಬೇಕಾದಷ್ಟು ಸಿಗುತ್ತೆ. ಅದನ್ನು ಆ ಕೂಡಲೆ ಉಪಯೋಗಿಸಿಕೊಂಡು ಮನ ಕ್ಲೇಶಪಡೋ ಯೋಗ್ಯತೆ ನಮ್ಮಲ್ಲಿರ ಬೇಕು, ಅಷ್ಟೆ.

ನನ್ನ ವಿಚಾರಾನೇ ಹೇಳ್ತೀನೆ. ಏನೋ ಒಂದು ಚಿಕ್ಕ ತೊಂದರೆ ಉಂಟಾಯಿ ತೆಂದರೆ ನಾನದನ್ನ ಸೊಗಸಾಗಿ ಪುಟವಿಟ್ಟು ದೊಡ್ಡ ವಿಪತ್ತಿನ ತರಹ ಮಾಡಬಲ್ಲೆ. ಆ ಕುರಿತು ಗಂಟೆಗಟ್ಟಲೆ ಯೋಚಿಸುತ್ತಾ ತಲೆ ಕೆರಕೊಳ್ಳಬಲ್ಲೆ. 'ಆತ್ಮಸ್ತುತಿ' ಆಗ ಬೇಡಿ—ಆ ಮಟ್ಟಿಗೆ ನನಗೆ ಒಳ್ಳೆಯ ಕಲ್ಪನಾಶಕ್ತಿಯಿದೆ. ಆ ಶಕ್ತಿ ಕವಿಗಳಿಗೆ ಮಾತ್ರ ಕಟ್ಟಿಟ್ಟಿದ್ದಲ್ಲ.

ಉದಾಹರಣೆಗೆ ಹೇಳ್ತೀನೆ: ಬೆಳಗ್ಗೆದ್ದು ಕಾಗದಗಳನ್ನ ಪೋಸ್ಟ್ ಮಾಡೋದಕ್ಕೆ ಪೋಸ್ಟ್ ಆಫೀಸಿನ ತನಕ ಹೋಗಿ ಬಂದರೆ ಸಾಕು; ನನ್ನ ತಲೆ ಕಾಯಲು ಸಾಕಷ್ಟು ಉರುವಲು ಸಿಗುತ್ತದೆ. ಕಾಗದವನ್ನು ಪೋಸ್ಟ್ ಬಾಕ್ಸಿನಲ್ಲಿ ಹಾಕಿದೆನೆ ಅಥವಾ ಅಲ್ಲಿಯೇ ಇದ್ದ ಕಸದ ತೊಟ್ಟಿಗೆ? ಪೋಸ್ಟ್‌ಬಾಕ್ಸಿನೊಳಕ್ಕೆ ಅದು ನೇರ ಹೋಗಿ ಬಿದ್ದಿರಬಹುದೆ, ಅಥವಾ ಅದರ ಗಂಟಲಲ್ಲಿ ಸಿಕ್ಕಿಕೊಂಡಿತೆ? ವಿಳಾಸ ಬರೆದಿದ್ದೆನೆ—ಇಲ್ಲವೆ? ವಿಳಾಸವಿಲ್ಲದ್ದಕ್ಕೆ, ಅದು ಮೃತ ಪತ್ರಾಲಯವನ್ನು ಸೇರಿದರೆ ಗತಿಯೇನು? ಅದನ್ನು ಕಾಯುತ್ತಿರುವ ಅಮೃತರಾಯನ ಗತಿಯೇನು? ಇತ್ಯಾದಿ ಇತ್ಯಾದಿ ಹತ್ತು ಹಲವು ವಿಚಾರಗಳಿಂದ ನನ್ನ ತಲೆ ತಪ್ಪಲೆ ಕಾಯುತ್ತದೆ.

ದಿನ ಪತ್ರಿಕೆಗಳನ್ನು ಮುಗುಚಿದರಂತೂ ಚಿಂತಿಸೋದಕ್ಕೆ ಸಾವಿರ ವಿಚಾರಗಳು ಸಿಗುತ್ತವೆ. ಅವರವರ ವಯೋಮಾನ ಅಭಿರುಚಿಗಳಿಗನುಸಾರವಾಗಿ ಶಕ್ತ್ಯಾನುಸಾರ ಎಲ್ಲರೂ ತಲೆಕಾಯಿಸಿಕೊಳ್ಳಬಹುದು. ವೃತ್ತ ಪತ್ರಿಕೆಗಳನ್ನು ಸುಮ್ಮನೆ ಓದಿಬಿಟ್ಟರೆ ಏನು ಫಲ? ತಲೆಕಾಯಿಸಿಕೊಳ್ಳಬೇಕು. ಅದು ಸದುಪಯೋಗ! ಯಾವ ಸಮಸ್ಯೆಯ ಕುರಿತು ನಮಗೆ ಏನೂ ಮಾಡಲು ಸಾಧ್ಯವಿಲ್ಲದಿದ್ದರೆ ತಲೆಯಾದರೂ ಕಾಯಬೇಕು. ಸಾವಿರ ಸಮಸ್ಯೆಗಳನ್ನು ತಲೆಯಲ್ಲಿ ತುಂಬಿಸಿಕೊಂಡು ಕೂಡ ಕೂಲಾಗಿ ಕಾಮಾಗಿರುವ ಅಭ್ಯಾಸ ಮಹಾ ಪುರುಷರಿಗೆ ಮಾತ್ರವಿರಲಿ. ನಮಗೆ ನಿಮಗೆ ಯಾಕದು?

ಮರೆತೆ, ನಿಮ್ಮ ಆರೋಗ್ಯಾನ ಕಡೆಗಣಿಸಬಾರದು! ಜಾಗ್ರತೆಯಿಂದ ಕಾಪಾಡಿಕೊಳ್ಳುತ್ತಿದ್ದೇವೆ ಅಂತೀರಾ? ಅದಲ್ಲ ನಾನು ಹೇಳೋದು. ಆರೋಗ್ಯದ ವಿಚಾರಾನೂ ಕೊಂಚ ತಲೆಗೆ ಹಚ್ಚಿಕೊಳ್ಳಿ. ಬೇಕಾದ ಹಾಗೆ ತಲೆ ಬಿಸಿಮಾಡುತ್ತೆ ಅದು. ಈವಾಗೇನೋ ನೀವು ನಿರೋಗಿಗಳಾಗಿರಬಹುದು. ಇನ್ನೊಂದು ನಿಮಿಷದ ನಂತರ ನೀವು ಹೀಗೇನೇ ಇರುತ್ತೀರೆಂದು ಧೈರ್ಯವಾಗಿ ಹೇಳಬಲ್ಲಿರಾ? ಹೋಗಲಿ, ನಾಳೆ, ಮುಂದಿನ ವಾರ, ಮುಂದಿನ ತಿಂಗಳು, ಮುಂದಿನ ವರ್ಷ—ನೀವು ಹೀಗೆಯೇ ಇರಬಲ್ಲಿರಾ? 'ಹುಂ' ಎಂದರೆ ನಾನು ಬೇರೆ ನಂಬಲಾರೆ. ವೈದ್ಯ ಡಾಕ್ಟರ್ ಹಕೀಮಾದಿಗಳು ಓದುವ ಧಪ್ಪ ಧಪ್ಪ ಪುಸ್ತಕಗಳಲ್ಲಿ ಒಂದನ್ನು ಎರವಲು ತಂದು ಸಾವಧಾನವಾಗಿ ಪುಟ ತಿರುವಿದರೆ ಅನಿಷ್ಟ ಪಕ್ಷ ೫೦೦ ಭವರೋಗಗಳ ಲಕ್ಷಣ ನಿಮ್ಮಲ್ಲಿರುವುದನ್ನು ಕಂಡುಕೊಳ್ಳುತ್ತೀರಿ ಸರಿ. ಆ ಮೇಲೆ ಇದ್ದೇ ಇದೆಯಲ್ಲ; ಎಂಥಾ ಚಿಂತೆ ಬೇಕು! ಒಂದು ವೇಳೆ ನಿಮಗೆ ನಿಮ್ಮ ಆರೋಗ್ಯದ ಕುರಿತು ಚಿಂತಿಸುವುದು ಸಾಧ್ಯವೇ ಇಲ್ಲವೆಂದರೂ ನಿಮ್ಮ ಹೆಂಡತಿ, ಮಕ್ಕಳು ಬಂಧು ಬಳಗ ಇತ್ಯಾದಿಗಳಿಲ್ಲವೆ? ಮಗುವಿಗೆ ಲಿವರೇ, ದೊಡ್ಡಪ್ಪನಿಗೆ ವಾತವೇ, 'ಎ'ಯಿಂದ 'ಜಡ್' ತನಕ ವಿರುವ ವಿಟಮಿನುಗಳಲ್ಲಿ ಯಾರ್ಯಾರಿಗೆ ಏನೇನು ಕಡಿಮೆ ಇರಬಹುದೆಂಬುದನ್ನು ತರ್ಕಿಸಿ, ಊಹಿಸಿ ಚಿಂತಿಸಬಾರದೆ?

ಕೊನೆಯದಾಗಿ ಇನ್ನೊಂದು ಅತ್ಯುತ್ತಮ 'ಚಿಂತನಾ ಸಾಮಗ್ರಿ' ಇದೆ. ಕಾಸು! ಕಾಸಿನ ಕುರಿತು ಚಿಂತಿಸಲಾರದವನು ಭೂಮಿಯ ಮೇಲಿರುವುದು ಶುದ್ಧ ದಂಡ. ಹಾಗೆ ಚಿಂತಿಸೋದು ಎಲ್ಲರಿಗೂ ಸಾಧ್ಯ. ಕೈಯಲ್ಲಿ ಕಾಸಿಲ್ಲವೆ? ಕಿಸೆ ಯಾವಾಗಲೂ ತೂತೆ? ಆಗ ಚಿಂತಿಸೋದಕ್ಕೆ ಯಾರಿಗೆ ಬರುಲ್ಲ! ಯಾರಿಗೆ ತಲೇ ಬಿಸಿಯಾಗುಲ್ಲ! ಹಾಗೆ ಬಿಸಿ ಏರಿ ಅದನ್ನು ಹದಕ್ಕೆ ತರಲು ನಾನಾ ಬಗೆಯ ಅಗ್ನಿ ಕಾಮುಕಗಳನ್ನು ಗಂಟಲಿಗೆ ಎರಚೋಣವೆಂದು ಸಾಲಮಾಡಿಯಾದರೂ ಹೋಟಲಿಗೆ ನುಗ್ಗುವವರಿಲ್ಲವೆ? ಇನ್ನು ರಾಶಿ ರಾಶಿ ಕಾಸುಳ್ಳವರಿಗೂ ಚಿಂತಿಸುವ ಸೌಲಭ್ಯ ಇಲ್ಲ ವೆಂದಾಗಲಿಲ್ಲ. ಕೂಡಿಟ್ಟಿದ್ದು ಇನ್ನು ಸಾಲದಲ್ಲಾ ಎಂದು ಅವರು ಚಿಂತಿಸಬಹುದು. ಎಲ್ಲಿ ಲೂಟಿಗರು ನುಗ್ಗಿ ಅಸ್ತ್ರಾಯಭಟ್ ಮಾಡಿಯಾರೋ, ಯಾವ ಸರಕಾರ ಬಂದು ಸ್ವಾಹಾ ಮಾಡೀತೋ, ಪುತ್ರ ಪೌತ್ರಾದಿಗಳ ಕೈಯಲ್ಲಿ ನಂದೂರಾಯನ ಬದುಕಾ ದೀತೋ ಎಂದೆಲ್ಲ ಶ್ರೀಮಂತರು ದಿನ ದಿನವೂ ಯೋಚಿಸಿ ಕೊರಗಬಹುದು. ಇನ್ನೊಂದು ಸೂಚನೆ: ಬೊಜ್ಜು ಕರಗಿಸುವುದರಲ್ಲಿ ಇದಕ್ಕಿಂತ ಒಳ್ಳೆಯ ಉಪಾಯ ವಿಲ್ಲ. ಕೊಬ್ಬಿಳಿಸುವ ಯಾವ ಫರಂಗಿ ಮಾತ್ರೆಗಳೂ ಇದಕ್ಕೆ ಸರಿಸಾಟಿಯಲ್ಲ.

ಒಟ್ಟಾರೆ ಹೇಳುತ್ತೇನೆ—ಚಿಂತೆ ಹಚ್ಚಿಕೋಬೇಡಾ ಅನ್ನುವವರ ಮಾತಿಗೆ ಕಿವಿ ಕೊಡಬಾರದು. ಚೆಲ್ಲಿದ ಹಾಲಿಗಾದರೂ ಗೋಳಿಡೋಣ. ಹಾಲು ಚೆಲ್ಲ ದಿದ್ದರೆ ಮೊಸರಿನಲ್ಲಿ ಕಲ್ಲು ಹುಡುಕೋಣ ಹೀಗೆ ಚಿಂತಿಸುವುದನ್ನು ಸಮರ್ಥಿಸಿ ಒಬ್ಬಾತ ಇಂಗ್ಲೀಷರವ ಎಲ್ಲಿಯೋ ನಾಲ್ಕು ಮಾತು ಬರೆದಿದ್ದ. ಅದು ಯಾವ ಪುಸ್ತಕದಲ್ಲಿ ಎಂದು ಹುಡುಕಿ ಹುಡುಕಿ ಸಿಗದಿದ್ದಕ್ಕಾಗಿ ಚಿಂತಿಸಿ ನನ್ನ ತಲೆ ಕಾದಿದೆ. (ಎಂಥ ಚಿಂತೆಯ ಸಾಧನ ನೋಡಿ!) ಆದ್ದರಿಂದ ವಿರಮಿಸುತ್ತೇನೆ. ಸಾಧ್ಯವಾದರೆ ನೀವೇನಾದರೂ ಯೋಚನೆ ಹಚ್ಚಿಕೊಂಡು ಒಡನೆ ಕಾರ್ಯ ಪ್ರವೃತ್ತರಾಗಿ. 'ಚಿಂತೆ ಯಾಕೋ ಮನುಜ' ಎಂದು ದಾಸರು ಕೇಳಿದ್ದಾರಾ? ಹಗಲು ರಾತ್ರಿ ಒಂದೇ ಚಿಂತೆ ಹಚ್ಚಿಕೊಂಡಿದ್ದ ಅವರು ನಮ್ಮನ್ನು ಕುರಿತು ಹಾಗೆ ಕೇಳಿದ್ದು ನ್ಯಾಯವೆ? ನಮ್ಮ ಕಾಲದಲ್ಲಿ ಚಿಂತೆ ಹಚ್ಚಿಕೊಳ್ಳದಿದ್ದರೆ ಇನ್ನು ಯಾವಾಗ? ದಾಸವರ್ಯರ ಅಹರ್ನಿಶ ಚಿಂತೆ—ಆ ಪರಮಾತ್ಮನ ಅಮಲು—ಅದಂತೂ ನಮಗೆ 'ಚಿಂತಿಸೋ ಮನುಜ' ಎನ್ನುವುದೇ ಈ ಕಾಲಕ್ಕೆ ಸಮಂಜಸವಲ್ಲವೆ?

—ರಾಮಕೃಷ್ಣ.

ಪ್ರೇಮಗೀತೆ

ಯಾರನೆಲ್ಲೋ ವನಿತೆಯೋರ್ವ
ಳನ್ನು ಕಂಡು—ಕವಿತೆಯೊಂದ
ಬರೆದು ಮುಗಿಸಿದೆ!
ಬೇಸರಾದ ಗೊಮ್ಮೆ ಕುಳಿತು
ಅದನು ಓದಿ! ಓದಿ! ನಲಿದು
—ಮನವ ತಣಿಸಿದೆ!
ಪ್ರೇಮ ಗೀತೆ ಬರೆದೆನೆಂದು,
ಮಡದಿಯರಿಯದಿದ್ದ ಳೊಮ್ಮೆ
ಕುರ್ಚಿಯಲ್ಲಿ ಕುಳಿತನಾನು ಉಲಿಯುತಿದ್ದೆನು!
'ಗೌರಿ! ಗೌರಿ!' ಎಂದು ಅದಕೆ
ನಾಮವಿತ್ತು ಕರೆದೆನದನು
ಅರಿತಳಾಕೆ ಕದ್ದು ಎನ್ನ ಹಿಂದೆನಿಂತಳು!
ಒಡನೆ ಕಸಿದು 'ದಿಟವಪೇಳಿ
ಗೌರಿ ಯಾರು?' ಎಂದು ಕೂಗೆ
ಬಾವಗಡಲಿನಲ್ಲಿ ಮಿಂದು ನಾನು ಬೆಚ್ಚಿದೆ!
ಅತ್ತಗಿದನು ತೋರಿ ನಿಮಗೆ,
ಶಾಸ್ತಿಗೈವೆನೆಂದು ಆಕೆ
ಹಿಂದೆ ಮುಂದೆ ನೋಡದೊಮ್ಮೆ ಮಾಯವಾದಳು!
ಕಂಬದಂತೆ ನಿಂತೆ ನಾನು!
ಕದ್ದು ಓದುತ್ತಿದ್ದೆನದನು;
ಆದರಿಂದು ಗುಟ್ಟುರಟ್ಟದಾಗಿ ಹೋಯಿತು!

—ಜಿ. ಶಂ. ಪರಮಶಿವಯ್ಯ.

—o—

ದಫೇದಾರ್ ದೇರಣ್ಣೋರು

" ಅನಂತಯ್ಯನ ಅತಂತ್ರೋತ್ಸವ "

"ದೇರಣ್ಣೋರೇ" ಎಂದು ಕೂಗಿದಾಗ ಮಿಂಚೊಂದು ಹೊಳೆದಂತಾಯಿತು. ಮಿಂಚೆ? ಎಂದು ಕಣ್ಣುಜ್ಜಿದಾಗ ಕಂಡದ್ದು ಸಾವಂತ್ರಮ್ಮನವರ ಹೊಳೆಯುವ ಬಟ್ಟಲುಗಣ್ಣು. ಧರ್ಮಾವರದ ಕೇಸರಿ ಬಣ್ಣದ ಸೀರೆ ಉಟ್ಟು ಮೈಗೆ ಒಪ್ಪುವ ತಿಳಿ ನೀಲಿಯ ಧಮಾಸ್ ಕುಪ್ಪುಸ ತೊಟ್ಟು ಮಲ್ಲಿಗೆ ಹೂವು ನಕ್ಕಹಾಗೆ ನಕ್ಕಾಗ 'ಧನ್ಯ ದೇರಣ್ಣ, ಇಂಥಾ ರತಿಯ ಕೈ ಹಿಡಿದ ನೀನೇಧನ್ಯ' ಎಂದುಕೊಂಡೆ. ಅವರು– ದಾವಣಗೆರೆಗೆ ಹೋಗಿದ್ದಾರೆ—ಅವರ ತಂಗಿಗೆ ಸಕತ್, ಖಾಯಿಲೆಯಂತೆ" ಎಂದು ಕೋಕಿಲವಾಣಿಯಲ್ಲಿ ಉಸುರಿದಾಗ ನಾನು ಬೇಸ್ತು ಬಿದ್ದ ಮುಖ ಮಾಡಿದೆ— ಹಿಂದಿನ ದಿನವೇ ದೇರಣ್ಣೋರು ಖಂಡಿತ ಅನಂತಯ್ಯನ ಅತಂತ್ರೋತ್ಸವದ ಕಥೆ ಹೇಳುತ್ತೇನೆಂದು ಭಾಷೆಯಿತ್ತು ನನಗೆ ಮೋಸಮಾಡಿದ್ದು ನನಗೆ ವ್ಯಥೆ ಉಂಟು ಮಾಡಿತು. ಅಂಥ ಸೊಗಸಾದ ದೇರಣ್ಣ ವಾಣಿ ಇಲ್ಲವಾಗಿ ಭಾನುವಾರ ಬೇವರ್ಸಿ ಯಂತೆ ಇಸ್ಪೀಟು ಬಡಿಯುವುದು ನನಗೆ ಹಿಡಿಸದು. "ಬನ್ನಿ ರೂಮಿನಲ್ಲಿ ಕೂಡಿ" ಎಂದು ಅಕ್ಕ ಸಾವಂತ್ರಮ್ಮ ಹೇಳಿದರು. ಹೋಗಿ ಕೂತೆ. "ಅದೇನೋ ಅನಂ ತಯ್ಯನ ಕಥೆ ಹೇಳ್ತಿನೀಂತ ಹೇಳಿದ್ದರಂತೆ, ಹೋಬೋಕೆ ಆಗಲಿಲ್ಲ—ಅದಕ್ಕೆ ಅದನ್ನ ಬರೆದು ಇಟ್ಟಿದ್ದಾರೆ. ನೀವು ಬಂದು ಕೇಳಿದರೆ ಓದುಕ್ಕೆ ಕೊಡು ಅಂತ ಹೇಳಿದರು" ಎಂದು ಒಂದು ಕಾಗದ್ದದ ಕಟ್ಟು ಮುಂದೆ ಇಟ್ಟರು ಸಾವಂತ್ರಮ್ಮ. ಸರಕ್ಕನೆ ಒಳಗೆ ಹೋಗಿ ಒಂದು ಪಾವು ಮಿರಿ ಮಿರಿ ಎನ್ನುವ ಅಸಲ್ ಗಟ್ಟಿ ಕಾಫಿ, ಪರಮಾಯಿಷಿ ಪಕೋಡ ಒಂದು ತಟ್ಟೆ ತಂದು ಇಟ್ಟರು. "ಇದೆಲ್ಲ ಏಕೆ ತಾಯಿ" ಎನ್ನುತ್ತಲೇ ತಟ್ಟೆ ಮುಂದೆಳೆದುಕೊಂಡೆ. "ಮೀನಾಕ್ಷಮ್ಮನವರು ಯಾವಾಗ ಊರಿಗೆ ಬರೋದು" ಎಂದು ಕೇಳಿದರು. "ಮಗೂಗೆ ಇನ್ನೂ ಮೂರು ತಿಂಗಳು, ಆರು ತಿಂಗಳತನಕ ಮಾವನವರು ಕಳಿಸೋಲ್ಲಂತೆ—ಅದಕ್ಕೆ ನಾನೇ ಹೋಗಿ ಬರ್‍ತಾಇದ್ದೀನಿ—ಈ ಭಾನು ವಾರ ಅನಂತಯ್ಯನ ಕಥೆಗಾಗಿ ಅರ್ಧಾಂಗಿ ಊರನ್ನೂ ಬಿಟ್ಟಿದ್ದೆ. ಸಧ್ಯ ದೇರಣ್ಣ ನವರು ಇಲ್ಲದಿದ್ದರೂ ಕಥೆ ಬರೆದಿದ್ದಾರಲ್ಲಾ ನಾನು ಧನ್ಯ." ಎಂದು ಹೇಳಿದೆ. "ಅದೇನು ಕಥೆಯೋ ಬರೀ ಬುರುಡೆ ಹೊಡೆಯುತ್ತಾರೆ ಅವರು–ನೀವು ಅದನ್ನೇ ನಂಬುವಿರಿ" ಎಂದು ಕಿರುನಗೆ ಬೀರಿದರು. "ಬುರುಡೆಯಾದರೂ—ಎಂಥಾ ರಸವ

ತ್ತಾದ ಬುರುಡೆ ಅದು!—ಅದರ ಸ್ವಾರಸ್ಯ—ನಾನೇ ಬಲ್ಲೆ– ನಾನು ಅದನ್ನ ಕೇಳಿ ಮತ್ತೆ ಮೀನಾಕ್ಷಿಗೆ ಬರೆಯದಿದ್ದರೆ ಅವಳು ನನ್ನ ಹತ್ತಿರ ಮಾತೇ ಆಡೋಲ್ಲ. ಆ ವಿರಸ ದಂಪತಿಗಳಲ್ಲಿ ಮೂಡಬಾರದಲ್ಲಾ—ಅದಕ್ಕೆ ಈ ಮಹರಾಯನ ಬೆನ್ನು ಬಿದ್ದು ಲಂಚ ಕೊಟ್ಟು ಕಥೆ ಕೇಳಬೇಕಾಗಿದೆ" ಎಂದೆ. "ಪಾಪ ಮೀನಾಕ್ಷಮ್ಮನಿಗಾಗಿ ಓದಿ" ಎಂದು ದಾಳಿಂಬೆ ಬೀಜದ ಹಲ್ಲು ಹೊಳೆಯುವಂತೆ ನಕ್ಕು ಅಡಿಗೆ ಮನೆ ಹೊಕ್ಕರು ಸಾವಂತ್ರಮ್ಮ. ನಾನು ಆರಾಮವಾಗಿ ದೇರಣ್ಣ ವಿರಚಿತ "ಅನಂತಯ್ಯನ ಅತಂತ್ರೋತ್ಸವ" ಓದತೊಡಗಿದೆ.

ನೋಡಿ ಅಕ್ಷರ—ಮೊದಲು ತೊಡರಿತು—ಒಂದು ಪಕೋಡ ಆಗಿದು ಅದರ ಗಮ್ಮತ್ತಿನ ಮಸಾಲೆ ವಾಸನೆ ನೆತ್ತಿಮುಟ್ಟಿದೊಡನೆ ಸುಲಲಿತವಾದ ತಿಳಿಗನ್ನಡ ಸುಲಿದ ಬಾಳೆಯ ಹಣ್ಣಿನಂತೆ ಅಳಿದ ಉಷ್ಣದ ಹಾಲಿನಂತೆ ಆಯಿತು. ಮೊದಲನೆಯ ವಾಕ್ಯವೇ ಮೈಯ್ಯಲ್ಲಿ ದೇಶಭಕ್ತಿಯ ವಿದ್ಯುಲ್ಲತೆಯನ್ನು ಪಸರಿಸಿದಂತಾಯಿತು—ಓದತೊಡಗಿದೆ.....ಅವರೇ ನನ್ನ ಕಿವಿಯಲ್ಲಿ ಕಥೆ ಹೇಳಿದಂತಿತ್ತು.

"ಬೋಲೋ ಭಾರತ್ಮಾತಾಕಿ ಜೈ" ಎಂಬ ಸ್ವಾತಂತ್ರ್ಯೋತ್ಸವದ ಕೂಗು ಅನಂತಯ್ಯನಿಗೆ ಹಿತವೆನಿಸಲಿಲ್ಲ. ಈ ಆಗಸ್ತು ಹದಿನೈದರಿಂದಲೇ ಅವನಿಗೆ ಪರತಂತ್ರ ಪ್ರಾಪ್ತವಾದದ್ದು. ಅದಕ್ಕೆ ಮುಂಚೆ ಸ್ವತಂತ್ರನಾಗಿದ್ದನೆಂದೇ ಅವ ತಿಳಿದುಕೊಂಡಿದ್ದ. ಕೇವಲ ಏಕ ಪಾರ್ಶ್ವದಲ್ಲಿ ಅತಂತ್ರನಾಗಿದ್ದ ಪ್ರಾಣಿ ಆಗಸ್ಟ್ ಹದಿನೈದರಿಂದ ಪರಿಪೂರ್ಣ ಅತಂತ್ರನಾಗಿದ್ದನು. ಮೆದು ಸ್ವಭಾವದವರಿಗೆ ಎಲ್ಲರೂ ಮಡುಗುವವರೇ ಎಂದು ನೀವು ತಲೆ ಆಡಿಸಿಬಿಡಬೇಡಿ. ಆದರೆ ನಮ್ಮ ಅನಂತಯ್ಯನ ಅಂತರಂಗ ಅರಿತು ಅರ್ಥಮಾಡಿಕೊಂಡವರಿಗೆ ಅಂಥಹ ಅವಸ್ಥೆ ಅವ ಅನುಭವಿಸಬಾರದಾಗಿತ್ತು ಎಂದೆನಿಸುತ್ತದೆ.

ನಿಜಕ್ಕೂ ಅನಂತಯ್ಯ ಬಹು ಮೆದು. ಬೆಣ್ಣೆಯಂಥ ಮನುಷ್ಯನಾದರೂ ಅದೇ ಬೆಣ್ಣೆಯನ್ನು ಸಮಯೋಚಿತ ಉಪಯೋಗಿಸದೆ ವೃಥಾ ಮನೋವ್ಯಥೆಗೆ ಗುರಿಯಾಗಿ ಕೊರಗುವನು. ಕೇವಲ ಕೂಸಿದ್ದಾಗಿನಿಂದ ಇದೇ ಸ್ವಭಾವ ಅವನದು, ಇವನ ಚಂಡು, ಇವನ ದಾಂಡು—ಕೊಬ್ಬರಿ ಭರ್ಫಿ ಇನ್ನೊಬ್ಬರ ಪಾಲೇ! ಅನಂತು ಅತ್ತು ತರಿಸಿಕೊಂಡು ಇವನ ತಮ್ಮ ಚಂಡಿ ಹಿಡಿದು ಅವನ ಹಟದಿಂದಲೇ ಸಂಪಾದಿಸಿದ ಭರ್ಫಿ ತಮ್ಮನಿಗೆ ಕೊಟ್ಟು ಕೈಮುಗಿಯುತ್ತಿದ್ದ. ಸ್ವತಂತ್ರವಾಗಿ ನೆಲುವಿನ ಮೇಲಿದ್ದ ಕೋಡು ಬಳೆಗೆ ಕೈ ಹಾಕಿ ಅವರಮ್ಮನಿಂದ ಸದೆಬಡಿಸಿಕೊಂಡಿದ್ದ. ಶಾಲೆಯಲ್ಲಿ ಮಾಸ್ತರ ಬೆತ್ತ ಸದಾ ಇವನ ಬೆನ್ನನ್ನೇ ಆಶ್ರಯಿಸಿತ್ತು. ಯಾರದೋ ತಪ್ಪಿಗೆ—ಇವನಿಗೆ ಬಾಸುಂಡೆ. ಕಾರಣ ಇವನು ಯಾವಾಗಲೂ ತಪ್ಪಿತಸ್ಥನಂತೆಯೇ ಮುಖ ಮಾಡಿರುತ್ತಿದ್ದ.

ಅನೇಕರಂತೆ ಅವನೂ ವರ್ಷಾನು ವರ್ಷದ ಶಾಲಾ ದಿನಗಳನ್ನು ಕಳೆದು ಹನ್ನೆರಡು ರೂಪಾಯಿನ ಪರೀಕ್ಷೆಯಲ್ಲಿ ಹತ್ತನೇಸಾರಿ ಇ. ಪಿ. ಎಸ್. ಅನ್ನಿಸಿಕೊಂಡ. ಆವತ್ತು ಅವರಮ್ಮ ಅವನಿಗೆ ಎಣ್ಣೆ ನೀರುಹಾಕಿ ಪಾಯಸಮಾಡಿ ದೇವರಿಗೆ ನಮಸ್ಕಾರ ಹಾಕಿಸಿದಳು. "ಸರಿಕಣೊ ಮಗು, ಮುಂದಿನ ತಿಂಗಳಲ್ಲಿ ಲಗ್ನ" ಎಂದಳು. ತಾಯಿಗೇ ಆತ ಮೊದಲಿಂದ ಬೆದರಿ ತನ್ನ ಅರ್ಧ ಸ್ವತಂತ್ರ ಕಳೆದುಕೊಂಡಿದ್ದ. "ಛೀ ಬೆಪ್ಪೆ" "ನಿನಗೇಕೆ ಓದು" "ನೀನೊಂದು ಪೀಡೆ" ಎಂದು ಆ ಮಹ ತಾಯಿ ಸದಾ ಅನಂತನನ್ನು ಸದೆಬಡಿಯುತ್ತಿದ್ದಳು. 'ಮಾತೆಯಲ್ಲ ಈಕೆ ಮಾರಿಯೇ ಸರಿ' ಎಂದು ಅನಂತಯ್ಯನ ಅಪ್ಪ ಅಂದದ್ದುಂಟು. ಪಾಪ ಆತ ಏನುತಾನೆ ಮಾಡಿಯಾನು! ಮಗನನ್ನು ವಹಿಸಿಟ್ಟುಕೊಂಡು ಮಾತಾಡಿದರೆ ತನಗೂ ಎರಡು ಮಡುಗಲಿಕ್ಕೇ ಆಕೆ ಸೈ ಎಂದು ತನ್ನ ಸ್ವಾತಂತ್ರ್ಯವನ್ನು ಆಕೆಯ ಕೈಗೆ ಕೊಟ್ಟ ಅನಂತಯ್ಯನ ಅಪ್ಪ ತನಗೇಕೆ ಬೇಕು ಒಣಾಹವ್ಯಾಸ ಎಂದು ಗೀತೆಗೆ ಇಳಿದಿದ್ದರು. "ಮುಂದಿನ ತಿಂಗಳು ಲಗ್ನ" ಎಂದಾಗ ಅನಂತುವಿಗೆ ಅಮ್ಮ ಯಾರ ಕೊರಳನ್ನು ನನ್ನ ಮುಂದೆ ಮಾಡುತ್ತಾಳೋ ಎಂದು ಶಂಕಿಸಿದ. ಬರೀ ಲಗ್ನವಾದರೆ ಹೇಗೆ? ಮಾಡಲು ನೌಕರಿ ಬೇಡವೆ?" ಎಂದು ಧೈರ್ಯದಿಂದ ಅಮ್ಮನನ್ನು ಕೇಳಿದ. ಆಕೆ ಕಣ್ಣು ಕೆಂಪಗೆ ಮಾಡಿದಳು "ನನ್ನ ಮದುವೆ ಯಾದಾಗ ನಿಮ್ಮಪ್ಪನಿಗೆ ಏನು ಕೆಲಸವಿತ್ತೊ? ಕೆಲಸಕ್ಕೂ ಲಗ್ನಕ್ಕೂ ಯಾಕೆ ಗಂಟು ಹಾಕುತ್ತಿ? ಈಗ ನಿಮ್ಮಪ್ಪನಿಗೆ ಕೆಲಸವಿದೆಯೇನು? ನಾನೇ ಮೇಡಮ್ಮನಾಗಿ ದುಡಿಯುತ್ತಿಲ್ಲವೇನು?....ನನ್ನೆದುರು ನಿಂತು ಮಾತಾಡುವಂತಾದೆಯೇನು?....ಇನ್ನೊಂದು ಮಾತಾಡೀಯ—ಮುಂದಿನ ತಿಂಗಳು ನಿನ್ನ ಲಗ್ನ—ಇದು ನಿಜ...." ಎಂದು ಗುಟುರು ಹಾಕಿದಾಗ ಅನಂತಯ್ಯ ತಳಮಳಿಸಿಹೋದ. ತಲೆ ಬಗ್ಗಿಸಿ ತನ್ನ ರೂಮಿಗೆ ಹೋದ—ಬೇರೆ ಮಾರ್ಗವೇ ಇರಲಿಲ್ಲ. ತಾಯಿಯ ಆಜ್ಞೆ ಸುಗ್ರೀವಾಜ್ಞೆ ಎಂಬುದು ಅನಂತನಿಗೆ ಗೊತ್ತು. ತಾಯಿಗೆ ಹೇಗೆ ಇದಿರಾಗಿ ಆಡುವುದು?

ಆಗಸ್ಟು, ಆ ತಿಂಗಳ ಹದಿನೈದರಂದೇ ಅನಂತಯ್ಯನ ವಿವಾಹ ಮಹೋತ್ಸವ, ತುಂಗಮ್ಮನೇ ಅವನ ಅರ್ಧಾಂಗಿ; ಅನಂತಯ್ಯನದು ಒಂದೇ ಕೊರತೆ. ತನಗೆ ಇನ್ನೂ ನೌಕರಿ ಸಿಕ್ಕಿಲ್ಲ ತನ್ನ ಭಾವಿ ಹೆಂಡತಿ ತುಂಗಮ್ಮ ಮೇಸ್ತ್ರಿಣಿ; ಅನ್ನಲಾರದೇ ಅನುಭವಿಸುತ್ತಿದ್ದ. ಏಳಲಾರ ಕೂಡಲಾರ—ಅವರಮ್ಮ ಬಿಡುತ್ತಾಳೇನು! ಉಹೂಂ–ಗುರುಹಿರಿಯರ ನಿಶ್ಚಯ, ಹರಿವಾಯುಗಳ ಪ್ರೇರಣೆ–ಶ್ರೀ ಲಕ್ಷ್ಮೀವೆಂಕಟೇಶ ಪ್ರಸನ್ನ ಆದಿತ್ಯಾದಿ ಗ್ರಹೇಸರ್ವೆ ಬಾಸಿಂಗ ಬಿಗಿದರು–ವಾಲಗ ಊದಿಸಿದರು–ಹಸೆಮಣೆಯ ಮೇಲೆ ಹಿಡಿದು ತಂದು ಕೂರಿಸಿದರು. ಅನಂತಯ್ಯ 'ಇದೇನು ಅವಸರ ಸಾವಧಾನ ಬೇಡವೆ?" ಎಂದು ಅರಚಿದ. ಪುರೋಹಿತರೂ ಹೇಳಿದರು ಸುಲಗ್ನಾ ಸಾವಧಾನ, ಸುಮುಹೂರ್ತಾ ಸಾವಧಾನ ಅಂತರಪಟ ಹಿಡಿದೇಬಿಟ್ಟರು. ಉಚ್ಛಸ್ವರದಲ್ಲಿ

ಡೋಲು ತಾಳ ಮೇಳ ಬೋರ್ಗರೆದವು, ಮುತ್ತೈದೆಯರ ಹಾಡು—ಗೃಹಸ್ಥರ ಫಲ ಮಂತ್ರಾಕ್ಷತೆ ಅರಿಶಿನಗಲ್ಲದ ತುಂಗಮ್ಮನೇ ಮೊದಲು ಇವನ ತಲೆಯ ಮೇಲೆ ಅಕ್ಕಿ ಕಾಳು ಹಾಕಿದಳು. ಅಂದ ಮೇಲೆ ಹೆಂಡತಿಯ ಮಾತೇ ಮೇಲು ಆಕೆ ಹೇಳಿ ಹೇಳಿದಂತೇ ಗಂಡ ಕೇಳಬೇಕೆಂದು ಗುರುಹಿರಿಯರ ಸಮ್ಮುಖದಲ್ಲಿ ಹೇಳಿದಂತಾ ಯಿತು! "ತುಂಗಮ್ಮನೇ ಮೊದಲು ಅಕ್ಕಿ ಕಾಳು ಹಾಕಿದಳು" ಎಂದು ಸುದ್ದಿ ಹರಡಿದಾಗ ಅನಂತಯ್ಯನ ಅಮ್ಮ ಹಿಗ್ಗಿದಳು-ತನ್ನ ಲಗ್ನದಕಾಲದಲ್ಲಿ ಹೀಗೆಯೇ ತಾನು ಅನಂತನ ಅಪ್ಪನ ತಲೆಯ ಮೇಲೆ ಮೊದಲು ಅಕ್ಕಿ ಕಾಳು ಹಾಕಿ ಹೀಗೆ ಈಗ ಅವನ ತಲೆಯ ಮೇಲೆ ಕುಳಿತುಕೊಂಡಂತೆ ತುಂಗಮ್ಮನೂ ಅನಂತನನ್ನು ಆಳುವುದು ನಿಶ್ಚಯವೆಂದು ತೃಪ್ತಿ ಪಟ್ಟಳು. ಅನಂತ ಅಳುಮೋರೆ ಹಾಕಿದ—ತನ್ನ ಗ್ರಹಚಾರಕ್ಕೆ ಹಣೆ ಬಡಿದುಕೊಂಡ. ಆದರೂ "ಇದೇನು ಅಕ್ಕಿಕಾಳು ಮೊದಲು ಹಾಕಿದಾಕ್ಷಣ ಅವಳ ಮಾತು ನಡೆಯಬೇಕೇನು?....ತುಂಗ ಸೌಮ್ಯಮೂರ್ತಿ—ನನ್ನ ಮಾತನ್ನೇ ಕೇಳುವುದಿಲ್ಲವೆಂದು ಈಗಲೇ ಹೇಗೆ ಹೇಳುವುದು?" ಎಂದು ಉಗುಳು ನುಂಗಿ ಸಮಾ ಧಾನ ಪಟ್ಟುಕೊಂಡ.

ಮುಂದಿನ ಆಗಸ್ಟ್ ಬರುವುದರಲ್ಲಿ ತುಂಗಮ್ಮ ಗಂಡನ ಮನೆಗೆ ಬಂದಿದ್ದಳು— ಅನಂತಯ್ಯನೂ ಹೆಸರಿಗಿರಲಿ ಅಂತ ಪ್ರೈಮರಿ ಸ್ಕೂಲು ಮಾಸ್ತರಾಗಿದ್ದ. ಮದು ವೆಯ ಮದುವಣಗಿತ್ತಿಯ ನಾಚಿಕೆ ಯದ್ವಾತದ್ವದ ಪೌಡರ್ ಬಳಿತದಲ್ಲಿ ತುಂಗಮ್ಮನ ನಿಜವಾದ ಬಣ್ಣ ಅನಂತಯ್ಯನಿಗೆ ಗೊತ್ತಾಗಿರಲಿಲ್ಲ. ಮೊದಲ ದಿನ!! ಅನಂತು ವಿಗೆ ಮರೆಯದ ಘಾಯದಂತಾಯಿತು. ಅವನಿಗೆ ಕಸವಿಸಿಯಾಯ್ತು—ಮಾನಿನಿ ಯಲ್ಲ ಈ ಪ್ರಾಣಿ ಸಾಕ್ಷಾತ್ ಪೈಲ್ವಾನಿಯೇ ಸರಿ ಎಂಬುದು ಅವನ ಅನುಭವಕ್ಕೆ ಬಂತು. ಕರಿ ರಂಗು—ಡೊಣ್ಣೆ ಮೂಗು—ಅದೇನು ಎತ್ತರ, ಇದೆಲ್ಲಾ ಹೋಗಲಿ ಬ್ರಹ್ಮಸೃಷ್ಟಿ ಎಂದರೆ ರಟ್ಟೆಗಳಲ್ಲಿ ಅದೇನು ಕಸುವು—ಮಾತಿನಲ್ಲಿ ಅದೇನು ಗಡುಸು— ಶಿವಶಿವ ಇವಳೊಡನೆ ಬಾಳ್ವೆ ಕೋಳಿ ಹುಂಜ, ತೋಳದ ಬಾಳ್ವೆಯೇ ಸರಿ—ಮರ್ಕ ಟನ ಕೈಗೆ ಸಿಕ್ಕ ಎಳೆಯ ಬಾಳೆಯ ಸುಳಿಯ ಪಾಡೇ ಸರಿ, ಎಂದು ಅನಂತಯ್ಯ ತನ್ನ ಬಿದುರಿನಂತಹ ಬಾಹುಗಳನ್ನು ಸೌತೆಕಾಯಿಯಂಥ ಚೂಪಾದ ತಲೆಯ ಮೇಲಿಟ್ಟು ಕೊಂಡು ಬಿಸಿಸುಯ್ದ.

ಅದೇನು ಆಗಸ್ಟು ತಿಂಗಳಿಗೂ ಅನಂತಯ್ಯನಿಗೂ ಗಂಟೋ ದೇವರೇ ಬಲ್ಲ. ಮೊನ್ನೆ ಇದೇಕೆ ಹೀಗೆ ಜಾತಕವನ್ನಾದರೂ ತೋರಿಸುವ ಎಂದು ನೋಡಿಸಿದಾಗ ಆಗಸ್ಟು ಹದಿನೈದರಂದೇ ಈತನ ಅವತಾರವಾದದ್ದೆಂದು ವೇದ್ಯವಾಯಿತು ಈ ಕಾರಣಗಳಿಂದಲೇ ಅನಂತುವಿಗೆ ಆಗಸ್ಟರ ಸ್ವಾತಂತ್ರ್ಯೋತ್ಸವ ಎಂದರೆ-ತನ್ನ ಹುಟ್ಟು- ತನ್ನ ಮದುವೆಗಳ ನೆನಪು ಬಂದು ಅವತ್ತು ಬಾವುಟ ಏರಿಸಲು ಕಸಿವಿಸಿಯಾಗುತ್ತಿತ್ತು. ಹೋಗಲಿ ಹೆಣ್ಣು ಹೇಗಾದರೂ ಇರಲಿ ತನ್ನನ್ನು ಕಾಡದಂತೆ ತಾನು ಹೇಳಿದಂತೆ

ಕೇಳಿಕೊಂಡು ಮರ್ಯಾದೆಯಾಗಿ ಎಲ್ಲರಂತೆ ಸವಿಯಾಗಿ ಸಂಸಾರ ಸಾಗಿಸೋಣ ವೆಂದರೆ ಅದಕ್ಕೂ ಅಡ್ಡಿಯೆ! ತುಂಗಮ್ಮ ಅನಂತನಿಂದ ತಾಳಿ ಕಟ್ಟಿಸಿಕೊಂಡಂದಿ ನಿಂದಲೇ ಅವನಮೇಲೆ ಅಧಿಕಾರ ಚಲಾಯಿಸಲು ಪ್ರಾರಂಭಿಸಿದ್ದಳು. ತಾನು ಮಿಡ್ಲ್‌ಸ್ಕೂಲ್ ಮಾಸ್ತರಿಣಿ, ಅನಂತ ಪ್ರೈಮರಿ ಸ್ಕೂಲು ಮಾಸ್ತರು; ಅಂದಮೇಲೆ ತಾನೇ ಒಂದು ಕೈ ಮೇಲೆಂದು ಅವಳ ಮೊದಲ ಸವಾಲು. ಅನಂತನೂ ಯೋಚಿಸು ವನು—ಕೇಶವ ಕಾಂಪೋಂಡರು-ರುಕ್ಮಿಣಿ ಡಾಕ್ಟರು, ಅವರಿಬ್ಬರ ಜೋಡಿಯಲ್ಲಿ ರುಕ್ಮಿಣಿ ಕೇಶವನಿಗೆ ಎಷ್ಟೊಂದು ಸ್ವಾತಂತ್ರ್ಯ ಕೊಟ್ಟಿದ್ದಾಳೆ-ಹಾಗೆಯೇ ಇವಳಿಗೂ ಇರೋಕೆ ಏನು ಧಾಡಿ. ರುಕ್ಮಿಣಿ ಎಷ್ಟು ಸುಂದರಿ! ಅಂಥಾದ್ದರಲ್ಲಿ ಕೇಶವನಂಥ ಕುರೂಪಿಯೊಡನೆ ಹೇಗೆ ವಿಧೇಯಳಾಗಿ ವರ್ತಿಸುತ್ತಾಳೆ? ಹೋಗಲಿ ಹೆಣ್ಣಾದರೂ ಸುಂದರಿಯೇ—ಬೈದರೂ ಸುಂದರವಾಗಿ ಬೈಯ್ಯುತ್ತಾಳೆ ಅಂದರೂ ಸೊಗಸಾಗಿ ದಬಾ ಯಿಸುತ್ತಾಳೆ. ಎಷ್ಟಾದರೂ ಸುಂದರಿ ಬೈಯ್ಯುವುದೆಂದು ಸುಮ್ಮನಿರಬಹುದಿತ್ತು— ಆ ಭಾಗ್ಯವೂ ಅನಂತಯ್ಯನ ಪಾಲಿಗಿಲ್ಲದಾಯಿತು. ಏನುಮಾಡಲೂ ಸಾಧ್ಯವೇ ಇರಲಿಲ್ಲ. ಲಗಾಮು ಆಗಲೇ ತುಂಗಮ್ಮನ ಕೈಗೆ ಸಿಕ್ಕಿತ್ತು. ಬಾರುಕೋಲಿನ ಬಿಸಿ ತಾಕಿದರೂ ಗಾಡಿಯನ್ನೆಳೆದು ಕುದುರೆ ಓಡಲೇ ಬೇಕಾಗಿತ್ತು. ಹಾಕಿದಷ್ಟು ಹುರುಳಿ ತಿಂದು ಆ ಕಡೆ ಈ ಕಡೆ ನೋಡದೆ ಕಡಿವಾಣ ಕಟ್ಟಿಸಿಕೊಂಡ ಗಾಡಿಯ ಕುದುರೆಯ ಪಾಡೇ ಆಗಿತ್ತು ಅನಂತಯ್ಯನ ಅವಸ್ಥೆ.

ಆಗಸ್ಟ್ ಹದಿನೈದು ಭಾರತಕ್ಕೆ ಸ್ವತಂತ್ರ ಬಂತು. ಎಂತಹ ಸ್ವತಂತ್ರ್ಯ? ಯಾರಿಗೆ ಎಂದು ಕೇಳಲೂ ಅನಂತಯ್ಯನಿಗೆ ಸ್ವಾತಂತ್ರ್ಯವಿಲ್ಲ. ತುಂಗಮ್ಮ ಗಾಂಧಿ ಟೋಪಿ ತಂದುಕೊಟ್ಟರೇ ಉಂಟು ಇಲ್ಲದಿದ್ದರೆ ಇಲ್ಲ. "ಬೋಲೋ ಭಾರತ್ ಮಾತಾಕೀ" ಎಂದು ಆಕೆ ಘೋಷಿಸಿದಾಗ ಅನಂತ "ಜೈ" ಎಂದು ಆ ಘೋಷಣೆ ಯನ್ನು ಪರಿಪೂರ್ಣ ಮಾಡಬೇಕು. ಇವತ್ತು-ನಾಳೆ-ಇವತ್ತು-ನಾಳೆ-ಈ ಬೇಡಿ ಯನ್ನು ಕಳಚಿಕೊಳ್ಳಲೇಬೇಕು—ತುಂಗಮ್ಮನನ್ನು ತನ್ನ ಆಡಳಿತದಲ್ಲಿ ಸೇರಿಸಿಕೊಳ್ಳ ಬೇಕೆಂದು ಅನಂತಯ್ಯ ಹವಣಿಸುವನು. ಎಲ್ಲಾ ನಿರ್ಧರಿಸಿಕೊಂಡು ಇವತ್ತು ಇದನ್ನು ಇತ್ಯರ್ಥ ಮಾಡಲೇಬೇಕೆಂದು ತೋಳು ಮಡಸಿ ತುಂಗಮ್ಮನೆದುರು ಬಂದಾಗ ಅವಳ ಜಿಹ್ವೆಗೆ ಬೆದರಿ ಬೆವತು ಹಳ್ಳವಾಗಿ ತೊದಲಿ-ಬಿಕ್ಕಿ-ಹಾಕಿದ ಗುಂಡಿ ಬಿಚ್ಚಿ ಮತ್ತೆ ಹಾಕಿ-ತಲೆ ತಗ್ಗಿಸಿ ಎಡಗಾಲ ಹೆಬ್ಬೆರಳಿನಿಂದ ನೆಲ ಕೆರದು ಕಣ್ಣು ಪಿಳಿಪಿಳಿ ಎಂದು ಪಿಟಕಿಸಿ—ಏನೋ ಹೇಳಿ ಶಾಲೆಗೆ ಕುಂಟುತ್ತಾ ಸಾಗಿಬಿಡುವಾಗ ಕಣ್ಣಂಚಿ ನಲ್ಲಿ ನೀರೂರುತ್ತಿತ್ತು.

ಇವತ್ತು ಆಗಸ್ಟ್ ಹದಿನೈದು. ದೇಶಕ್ಕೆ ದೇಶವೇ ಸ್ವಾತಂತ್ರ್ಯೋತ್ಸವ ನಡೆ ಸುತ್ತಿದೆ. ಆದರೆ ನಮ್ಮ ಅನಂತನಿಗೆ ಮಾತ್ರ ಅತಂತ್ರೋತ್ಸವವಾಗಿದೆ. ಮೈಸೂರು ಪಾಕು ಮಾಡಿಸಬೇಕೆಂದು ಬಯಕೆ. ಆದರೆ ಅದನ್ನೇ ಮಾಡು ಎಂದು ಹೆಂಡತಿಗೆ

ಹೇಳುವ ಸ್ವಾತಂತ್ರ್ಯ ಆ ಪ್ರಾಣಿಗಿಲ್ಲ. ತನ್ನ ಪ್ರೀತಿಯ ಬಿಸಿಬೇಳೆ ಭಾತನ್ನ ಮಾಡಿ ತುಂಗ ಅನಂತನಿಗೆ ಬಡಿಸಿದಳು—ಪಾಷಾಣದಂತೆ ತಿಂದ. ಆ ಖಾರಕ್ಕೆ ಮೂಗಲ್ಲಿ ನೀರು ಕಿತ್ತುಕೊಂಡಿತು. ವಿಪರೀತ ಖಾರವಾಗಿತ್ತು. ಆ ಖಾರದ ಜೊತೆಗೆ ಬಡಿಸಿದ ಹಿಡಿಂಬಿ—ಅವಳ ಆಳ್ವಿಕೆಗೆ ಸಿಕ್ಕಿ ಈ ಬಾಣಸಿಗನ ದುಃಖ ಉಕ್ಕೇರಿ ಬಂತು. ಧೈಯದಿಂದ ಉಗುಳು ನುಂಗಿ "ತುಪ್ಪಾ ಖಾರಾ" ಎಂದ "ಆಂ – ತುಪ್ಪವೇ" ಎಂದು ತುಂಗ ಗದುರಿಬಳು—"ಅಲ್ಲ ಅಲ್ಲ ಉಪ್ಪು ಉಪ್ಪು" ಎಂದು ತೊದಲಿದ, ಅಲ್ಲಿಗೂ ಆಕೆ ಬಿಡಲಿಲ್ಲ "ಉಪ್ಪೇೇೇ" ಎಂದು ರಾಗ ಎಳೆದು ಕಣ್ಣು ಕೆಂಪಗೆ ಮಾಡಿದಳು. "ಅಲ್ಲ ಅಲ್ಲ-ಬಿಸಿಬೇಳೆ ಬಹು ಬಿಸಿಯಾಗಿತ್ತು ಉಫ್ ಉಫ್ ಎಂದೆ...." ಎಂದ. ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯಿತು. ಹೊರಗಡೆ "ಬೋಲೋ ಭಾರತ್ ಮಾತಾಕೀ" ಎಂಬ ಕೂಗು. "ಬೋಲೋ ಅಲ್ಲಿ, ನನ್ನ ಪಾಲಿಗೆ ಲಬೋ ಲಬೋ" ಎಂದು ನೀರು ಕುಡಿದ. ಮನೆಯಲ್ಲಿ ತನಗಿಲ್ಲದ ಸ್ವಾತಂತ್ರ್ಯ ದೇಶಕ್ಕೆ ಬಂದರೆಷ್ಟು ಬಿಟ್ಟರೆಷ್ಟು—ಎಂದು ಪರಿತಪಿಸಿದ. ತಲೆ ತಗ್ಗಿಸಿ ಗಬಗಬನೆ ತಿಂದು ಇನ್ನು ಏನು ಮಾತಾಡಿದರೂ ತನಗೆ ಉಳಿಗಾಲವಿಲ್ಲವೆಂದುಕೊಂಡು ಎದ್ದ. ಹೊರಗಡೆ ಕೇಳಿಬಂತು "ಲಬೋ" ಕೂಗು. ಇದು ತನ್ನ ಅತಂತ್ರೋತ್ಸವದ ಘೋಷಣೆ ಎಂದು ಹೊದ್ದು ಮಲಗಿದ.

ಓದಿ ಮುಗಿಸಿದಾಗ ಶ್ರೀಮತಿ ದಫೇದಾರಿಣಿಯವರು ಕೈ ಒರಸಿಕೊಂಡು ಅಡಿಗೆ ಮನೆಯಿಂದ ಬಂದರು. "ಮುಗಿಯಿತೆ ಕಥೆ ಓದಿ" ಎಂದಾಗ ನನಗೆ ನಾಚಿಕೆಯಾಯಿತು. ದಫೇದಾರ್ರು, ನಾನೂ ಅನಂತಯ್ಯನಂತೆಯೇ ಇದ್ದರೂ, ಮೀನಾಕ್ಷಿಯ ದಬಾವಣೆಯಲ್ಲಿ, ಸಾವಂತ್ರಮ್ಮನವರ ಆಳ್ವಿಕೆಯಲ್ಲಿ ಪ್ರೇಮದ ಮೂಸೆಯಲ್ಲಿ, ಕಾದ ಚಿನ್ನದ ಧಾರೆ ಹರಿದು ಬರುತ್ತಿತ್ತು. "ತುಂಗಮ್ಮ ತೀರಾ ಕ್ರೂರಿ—ಅನಂತಯ್ಯನಿಗೆ ಅನ್ಯಾಯವಾಗಿದೆ ಎಂದೆ" "ಅದು ತಮ್ಮ ಅಭಿಪ್ರಾಯ—ನಮ್ಮನೆಯವಳನ್ನು ಕೇಳಿ ಅವರ ಅಭಿಮತದಲ್ಲಿ ಅನಂತಯ್ಯ ಅತಿ ಸುಖಿ" ಅನ್ನುತ್ತಾರೆ—ಎಂದಾಗ ಮಾತಿನಲ್ಲಿ ಕೊಂಕಿತ್ತು. "ಇರಲಿ ಈ ಕಥೆಯ ಪ್ರತಿಯನ್ನು ಮೀನಾಕ್ಷಿಗೆ ಕಳಿಸುತ್ತೇನೆ ಎಂದು ರಸಗವಳ ಹೊಡೆದ ತೃಪ್ತಿಯಿಂದ ದ|| ದೇರಣ್ಣನವರ ಮನೆ ಬಿಟ್ಟು ಹೊರಟೆ.

—ದಾಶರಥಿ ದೀಕ್ಷಿತ್

ಬಂಜೆಯ ಮಾತು!

ಪತಿಯೆ ನಿಮ್ಮಮಾತಕೇಳಿ,
ಚಿಕ್ಕದೊಂದು ಪಟುವಸಾಕಿ,
ತುಪ್ಪ ಬೆಣ್ಣೆಯನ್ನೆ ಇತ್ತು ಸಾಕಿಸಲಹಿದೆ!
ಶಾಲೆಗವನು ಹೋಗನೆನಲು,
'ಬೇಡ'ವೆಂದು ನೀವು ಬಿಡಲು,
ಕಾಲು ಕೈಯಿ ಬಲಿತ ಮೇಲೆ ಮಾತಕೇಳದೆ—
ಸಿನಿಮವೆಷ್ಟೊ ನೋಡಿದಾಗ,
ಧನವನೆಷ್ಟೊ ನುಂಗಿದಾಗ,
ಒಳ್ಳೆದಾಯಿ ತೆಂದು ನೀವು ಸುಮ್ಮನಾದಿರಿ!
ಇರುಳಲರ್ಧರಾತ್ರಿಗವನು,
ಬಂದನೆಂದು ಪೇಳಿದಾಗ,
'ಬುದ್ಧಿವಂತನವನಿಗೇನು?' ಎಂದು ನುಡಿದಿರಿ!
ಮೊನ್ನೆಯಿಂದ ಮಾಯವಾದ,
ಎನ್ನದೊಂದು ಸರವಕದ್ದ;
ನಿಮ್ಮ ಧನವನೆಲ್ಲಮೆದ್ದ ಯಾರ ಜೊತೆಯೊ ಓಡಿದ!
ಕಣ್ಣ ನೀರ ಕರೆಯಲೇನು?
ಮಗುವೆ ಬೇಡ ವೆಂದನಾನು!
"ಬಂಜೆ ನೀನೆ ಬೇಡ"ವೆಂದು ನೀವು ನುಡಿದಿರಿ!

—ಜೀ. ಶಂ. ಪರಮಶಿವಯ್ಯ

—o—

ಅಯ್ಯೋ! ಮರೆತೆ ಕಣೋ! ಎಂದ ಬುಳ್ಳ

“ಲೋ ಬುಳ್ಳ. ಅಷ್ಟು ಚೆನ್ನಾಗಿ ಪದ್ಯ ಬರೀತಿ! ಹಾಗೇ ಒಂದು ಲೇಖನ ಬರೆದು ಕೊಡೋ” ಎಂದು ಅಂಗಲಾಚಿ ಕೇಳಿಕೊಂಡೆ.

“ಖಂಡಿತ ಬರೆದು ಕಳಿಸುತ್ತೀನೋ ಮುಂದಿನ ತಿಂಗಳು” ಎಂದ.

ಮುಂದಿನ ತಿಂಗಳು ಅವನ ಮನೆ ಬಾಗಿಲು ಕಾದೆ— ಅಗಸರವನ ತರಹ.

“ಅಯ್ಯೋ! ಮರೆತೆ ಕಣೋ! ಮುಂದಿನ ತಿಂಗಳು ನಾನೇ ತಂದುಕೊಡುತ್ತೀನೆ ಕಣೋ” ಎಂದ ಸೌಜನ್ಯದಿಂದ.

“ಅಲ್ಲವೋ! ಮನೆಗೆ ಬಂದು ಕೇಳಿದರೆ ಮಜ್ಜಿಗೆ ಕೊಡದೆ ಇದ್ದೋಳು ಹೇಳಿ ಕಳಿಸಿದರೆ ಹಾಲು ಕೊಡುತ್ತಾಳೇನೋ” ಎಂದೆ.

“ಇಲ್ಲ ಕಣೋ ಖಂಡಿತವಾಗಿ ಬರೆದುಕೊಡುತ್ತೇನೊ” ಎಂದ.

ಇನ್ನೆರಡು ತಿಂಗಳು ಭೇಟಿಯಾದಾಗಲೂ “ಅಯ್ಯೋ! ಮರೆತೆಕಣೋ” ಎಂದೇ ಪಲ್ಲವಿ.

ಕಡೆಗೆ ರೇಗಿಬಿಟ್ಟೆ. “ಆದರೆ ಆಗುತ್ತೆ ಅನ್ನಿ, ಇಲ್ಲದೆ ಇದ್ದರೆ ಸಾಧ್ಯವಿಲ್ಲ ಅನ್ನಿ” ಎಂದೆ. ರೇಗಿದಾಗ ಬಹು ವಚನದ ಸಂಭೋದನೆ ಅಲ್ಲವೇ?

ಬುಳ್ಳನಿಗೂ ಮನಸ್ಸು ಅಯ್ಯೋ ಎನ್ನಿಸಿರಬೇಕು. “ಹಾಗಲ್ಲಾ! ಮಿತ್ರಾ ರೇಗಬೇಡ. ಮರೆತುಹೋದರೆ ಏನುತಾನೇ ಮಾಡೋದು? ಅಲ್ಲದೆ ಹೀಗೆ ಮರೆಯುವುದರಿಂದ ಕೆಲವು ಮಹತ್ಪ್ರಯೋಜನೆಗಳೂ ಉಂಟು. ಅಂತ ನನ್ನ ಸಮಾಧಾನ ಮಾಡಲು, ನನ್ನ ಕೋಪ ಇಳಿಸಲು ಒಂದು ಭಾಷಣವನ್ನೇ ಮಾಡಿಬಿಟ್ಟು ನನ್ನನ್ನು ಥಂಡಾಮಾಡಿದ.

“ಮರೆವು ಎನ್ನುವುದು ಮನುಷ್ಯರಿಗೆ ದೈವದತ್ತವಾದ ಕೆಲವು ಶಕ್ತಿಗಳಲ್ಲಿ ಅತಿ ಮುಖ್ಯವಾದ ಶಕ್ತಿ. ಸ್ವಪ್ರಯತ್ನದಿಂದಲೂ ಶ್ರದ್ಧೆ ಸಾಧನಗಳಿಂದಲೂ ಈ ಶಕ್ತಿ

ಯನ್ನು ವೃದ್ಧಿಪಡಿಸಿ ಬಲಪಡಿಸಿಕೊಂಡಲ್ಲಿ ಇಡೀ ಜನಾಂಗಕ್ಕೇ ಮಹತ್ಪ್ರಯೋಜನೆಗಳು ಆಗುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ ಎಂಬುದೇ ನನ್ನ ಮತ".

ಮರೆವು ಅಂದರೆ ಸುಲಭವಾಗಿ...ಮರೆತುಬಿಡೋದು. ಎಂದರೆ ಎಲ್ಲರಿಗೂ ತಿಳಿದ ವಿಷಯ ಆದರೆ ಯಾವುದನ್ನು ಮರೆಯುವುದು ಯಾವಾಗ ಮರೆಯುವುದು. ಹೇಗೆ ಮರೆಯುವುದು ಎಂಬ ವಿಚಾರ ಬಹಳ ಗಹನವಾದದ್ದು. ಯಾಕೆ ಮರೆಯುವುದು ಎನ್ನುವುದು ಮಹತ್ವವಾದ ವಿಚಾರ.

ನಾವು ಮರೆತು ಇನ್ನೊಬ್ಬರಿಗೆ ಪ್ರಯೋಜನವಾಗುವುದು ಇನ್ನೊಬ್ಬರು ಮರೆತು ನಮಗೆ ಪ್ರಯೋಜನವಾಗುವುದು, ನಾವು ಮರೆತು ನಮಗೆ ಪ್ರಯೋಜನವಾಗುವುದು, ಹೀಗೆ ಮೂರು ವಿಧಾನಗಳಿವೆ.

ನಾವು ಮರೆತು ಇನ್ನೊಬ್ಬರಿಗೆ ಪ್ರಯೋಜನವಾಗುವುದು ಕೇವಲ ಧಾರ್ಮಿಕ ಅಥವಾ ವೇದಾಂತ ವಿಚಾರ. ಇದರ ಗೊಡವೆ ಈಗಲೇ ನಮಗೆ ಬೇಡ.

ಮಿಕ್ಕೆರಡು ಮರೆವುಗಳೂ ನಮ್ಮ ಉಪಯೋಗಕ್ಕೇ ಅಲ್ಲವೇ? ಅಂದಮೇಲೆ ಇಂತಹ ಮರೆವನ್ನು ವಿದ್ಯಾರ್ಥಿ ದೆಸೆಯಿಂತ ಅಂತ್ಯದ ತನಕ ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು.

ಸಹಪಾಠಿಗಳಿಂದ ಎರವಲು ತಂದ ಪುಸ್ತಕಗಳನ್ನು ಹಿಂತಿರುಗಿಸಲು ಮರೆಯಬೇಕು. "ಕೊಟ್ಟವ ಕೋಡಂಗಿ ಈಸುಕೊಂಡವ ಈರಭದ್ರ." ಅಲ್ಲವೇ!

ಕೇಳಿದಂತೆಲ್ಲಾ ಮಾವ ಹಣ ಕಳುಹಿಸಲಿಲ್ಲವೆಂದು, ಹೊಸ ಅಳಿಯ 'ರತ್ನ'ಳಿಗೆ ಪ್ರೇಮಪತ್ರಗಳನ್ನು ಬರೆಯುಲು ಕೆಲವು ದಿನ ಮರೆತರೆ, ಮಾವನ ಬಿಗಿಮುಷ್ಟಿಯನ್ನು ಮಗಳ ಕಣ್ಣೀರು ಸಡಿಲಿಸಿ ಹಣದ ಹೊಳೆ ಪ್ರವಾಹದಂತೆ ಕೂಡ ಬರಬಹುದು.

ಮನೆಯಾಕೆಗೆ ಹೊಸ ಬಟ್ಟೆ ತಂದುಕೊಡುವುದಾಗಿ ಮಾತು ಕೊಟ್ಟಿದ್ದಾಗ, ಅಥವಾ ಶುಕ್ರವಾರ ಸಂಜೆ ಸಿನೀಮಾಕ್ಕೆ ಜತೆಯಲ್ಲಿ ಹೋಗೋಣವೆಂದು ಭಾಷೆ ಕೊಟ್ಟಿದ್ದಾಗ, ಬೇರೆ ಕಾರ್ಯಗೌರವದ ನೆವದಲ್ಲಿ ಆ ಮಾತು ಮರೆತೆನೆಂದು ಪಶ್ಚಾತ್ತಾಪ ಸಾಕ್ಷಾತ್ತಾಗಿ ನಟಿಸಿದರೆ ಪ್ರಯೋಜನವಿಲ್ಲವೇ ?

ರಾಜಕೀಯದಲ್ಲೂ ವ್ಯವಹಾರದಲ್ಲೂ ಮರೆವು ಮಂತ್ರವೇ ಸಕಲಕಾಲದಲ್ಲೂ ರಕ್ಷಿಸುವ ದಿವ್ಯ ಮಂತ್ರ. ಕಾರ್ಯಾರ್ಥಿಯಾಗಿ ನಮ್ಮ ಹಳೆ ಗೆಳೆಯ ಬಂದು ಜ್ಞಾಪಕ ವಿದೆಯೇ ಎಂದು ಹಲ್ಲು ಕಿರಿದರೆ ಇಲ್ಲ ಎಂದು ಧೈರ್ಯವಾಗಿ ಅನ್ನುವುದು. ತಾವೂ ನಾನೂ ಹೈಸ್ಕೂಲಿನಲ್ಲಿ ಮೂರು ವರ್ಷ....ಎಂದು ಮುಂದುವರಿದರೆ "ಇಲ್ಲವಲ್ಲಾ ! ನಾನು ಗುರುಕುಲದಲ್ಲಿ, ಓದಿದೆ. ಅನ್ನುವ ಚಾಣಕ್ಷತನಬೇಕು. "ನಿಮ್ಮ ಓಟಿನ ಚೀಟಿ ನಾನೇ ಕಿಂಕರಪುರದಲ್ಲೆಲ್ಲಾ ಹಂಚಿದೆ ಎಂದೇನಾದರೂ ಅವ ಅಂದರೆ ಹಾಗೇ!

ಆದರೆ ನಾನು ಕಿಂಕರಪುರದ ಸ್ಪರ್ಧಿ ಅಲ್ಲವಲ್ಲಾ ಎಂದು ದಬಾಯಿಸಲೇಬೇಕು. ಜಾಣತನದ ಮರೆವೇ ಕುಬೇರತ್ವಕ್ಕೆ ಮೊದಲ ಮೆಟ್ಟಿಲು, ನರವಾಹನಕ್ಕೆ ಸುಗಮ ದಾರಿ.

ಉಪಾಧ್ಯಾಯಶ್ಚ, ವೈದ್ಯಾಶ್ಚ–ಹೇಳಬೇಕೇ ? ಮರೆವಿನಿಂದ ಕಷ್ಟದ ನೆನಪೇ ಅಳಿಸಿ ಹೋಗುವುದಲ್ಲದೆ ಹಣವೂ ನಮ್ಮ ಕಿಸೆಯಲ್ಲೇ ಉಳಿಯುತ್ತದೆ.

ಆದರೆ ಒಂದೊಂದು ಸಲ ಮರೆತೆ ಎಂದು ಮೊದಲು ಹೇಳಿ ನಂತರ ಮಾತನಾಡು ವಾಗ ಜ್ಞಾಪಕವಿದೆ ಎಂದು ತೋರಿಸಿಕೊಳ್ಳುವ ಸನ್ನಿವೇಶ ಉಂಟಾಗಬಹುದು. "ಸಾರ್! ಎಂದು ವಿದ್ಯಾರ್ಥಿ ಮಾಸ್ತರೆಡೆಗೆ ಬರುತ್ತಾನೆ–ನಾಲ್ಕು ವರ್ಷದ ಅನಂತರ ನೀವು ನನಗೆ ಸ್ವಂತ ಪಾಠ ಹೇಳಿಕೊಟ್ಟಿರಿ ಸಾರ್! ಅಂತಾನೆ. ಮಾಸ್ತರಿಗೆ ಗೊತ್ತು ಅವ ಹತ್ತು ನಂಬರೂ ಬಾರದೆ ನಪಾಸಾದ ಅಂತ. ಹಾಗೂ ಗೊತ್ತು ಒಂದು ತಿಂಗಳ ಪ್ರೈವೇಟ್ ಫೀಜನ್ನು ಬಾಕಿ ಉಳಿಸಿಕೊಂಡಿದ್ದಾನೆ ಅಂತ. "ಜ್ಞಾಪಕವೇ ಇಲ್ಲ ವಲ್ಲಯ್ಯಾ! ಎಷ್ಟೋ ಜನ ಹುಡುಗರು ಎಂದು ಜಾರಿಕೊಳ್ಳುತ್ತಾನೆ ಮಾಸ್ತರು. ಆಗ ಹುಡುಗ ಆಸರ್ತಿ ನಪಾಸಾದೆ ಸಾರ್ ಅದೇ ನನ್ನ ಪುಣ್ಯ. ಈಗ ಯೂನೋದಲ್ಲಿ ಹಿರಿ ಯಧಿಕಾರಿ ನಾನು, ನಪಾಸಾದೆ ಅಂತ ದೆಹಲಿಗೆ ಹೋಗಿ ಅಲ್ಲಿ ಅಮೆರಿಕಾ ಪ್ರತಿ ನಿಧಿಯ ಪರಿಚಯ ಬೆಳಸಿ ಅವನಿಗೆ ಹಿಂದೀ ಕಲಿಸಿ, ನಾನು ಈಗ ಸುಖಜೀವನ, ದೊಡ್ಡಹುದ್ದೆ, ಗಿಟ್ಟಿಸಿದ್ದೇನೆ ಸಾರ್; ನಿಮ್ಮನ್ನು ನೋಡಿ ಹೋಗೋಣ ಅಂತ ಬಂದೆ. ನಿಮ್ಮಿಂದಲೇ ನಾನು ಬದುಕಿದ್ದು ಎನ್ನುತ್ತಾನೆ. ಅವನ ಬಟ್ಟೆ ಬರೆ ವಜ್ರದ ಟೈಪಿನ್ ಎಲ್ಲವೂ ಸುದ್ದಿ ದಿಟ ಎನ್ನುತ್ತವೆ. ಮಾಸ್ತರು ಬೇಹುಷಾರಾಗಿ ಹಾಗಾದರೆ ಒಂದು ತಿಂಗಳ ಬಾಕಿ ನಿನ್ನದಲ್ಲವೇ ಎನ್ನುತ್ತಾರೆ.–ಆಶೆ.–.

ಚಾಲೂಕು ವಿದ್ಯಾರ್ಥಿ "ಇದು ಮಾತ್ರ ಜ್ಞಾಪಕವಿದೆಯೇ ಸಾರ್" ಎಂದು ನಗುತ್ತಾ ಅಂದೇಬಿಡುತ್ತಾನೆ.

"ಅಯ್ಯೋ! ನನಗೂ ವಯಸ್ಸಾಯಿತಯ್ಯ! ಮರೆತು ಹೋಗೋದು ಸಾಮಾನ್ಯ. ಹಾಗೆ ಮರೆಯೋದೂ ಮರೆತು ಹೋಗುತ್ತೆ ಒಮ್ಮೊಮ್ಮೆ ಅಂತಹದೇ ಜ್ಞಾಪಕ ಇರೋದು." ಅಂತ ಮಾಸ್ತರು ನುಸುಳುತ್ತಾನೆ.

ಅದೃಷ್ಟಶಾಲಿ ವಿದ್ಯಾರ್ಥಿ ಈ ಚಾಲೂಕು ನೋಡಿ ತಲೆಯಾಡಿಸಿ ಬಾಕಿ ಫೀಜನ್ನು ದ್ವಿಗುಣಿತಮಾಡಿ ಮಾಸ್ತರಿಗೆ ಅರ್ಪಿಸಿ ವಂದಿಸಿ ವಿಮಾನ ನಿಲ್ದಾಣಕ್ಕೆ ಹೊರಡುತ್ತಾನೆ.

ನೀನು ಬುದ್ಧಿವಂತ! ನಿನಗೆ ತಿಳಿಯುಲ್ಲವೇ ಮರೆವಿನ ಮಹತ್ಪ್ರಯೋಜನೆಗಳು. ಅಂತ ಬುಳ್ಳ ಈ ಲೇಖನವನ್ನೇ ನನ್ನ ಕೈಲಿಟ್ಟ. ಮರೆಯೋದಕ್ಕೆ ಮರೆತು ಇದನ್ನು ಬರೆದೆ ಏನು ಬೇಕಾದರೂ ಮಾಡಿಕೋ ಎಂದು ಮುಕ್ತಾಯ ಸೂಚಿಸಿದ.

ಒಲ್ಲೆ! ಒಲ್ಲೆ!

ಅಲ್ಲಿ ಇರಿಸಲೆ? ಹೊರಕೆತರಿಸಲೆ? ಇದುವೆ ಎನ್ನಯಪ್ರಶ್ನೆ!
ಬಿಡಿಸಲಾರದೆ ಮುಗಿಸಲಾರದೆ ಮೆದಳ ತಿನ್ನುವ ಪ್ರಶ್ನೆ!
ದವಡೆ ಊತವ, ತಲೆಯಸಿಡಿತವ ಸಹಿಸಿ ಹಲ್ಲನು ಉಳಿಸಲೆ?
ಅಥವ, ಆಯ್ಯೊ!, ಕೀಳಿ ಎನ್ನುತ ಬಾಯನಗಲಿಸಿ ಕೇಳಲೆ?
ಹಲ್ಲಸಾಲಿನ ಅಂದ ಕೆಡಿಸುತ, ನರಕಯಾತನೆ ನಿಲಿಸಲೆ?
ಆದರಲ್ಲಿಯ ಪೀಠ ಸೇರುತ, ಇಕ್ಕಳಿಗನಾ ವೈದ್ಯನು,
ಛೆ! ಛೆ! ನೋವೇ ಆಗದೆಂದು ಸವಿಯಸುಳ್ಳನು ಹರಿಸುತ,
ಆ!.........ಆ! ಇನ್ನು ಕೊಂಚ., ಆಯಿತೀಗಲೆ. ಎನ್ನುತ,
ಕಿತ್ತು ಕಿತ್ತದ ಸಪ್ತನಾಡಿಗಳೊಡನೆ ಮೇಲಕೆ ಎಳೆಯುತ,
ಬೆವರ ನೊರಸುತ ತೋಳು ಬಿಗಿಯುತ ಸೆಳೆದು ಎಳೆದವ ಕೀಳುತ
ಶಂಖವಾದ್ಯವು! ಹೋಳಿಹಬ್ಬವು! ಲಬೋ ಲಬೋ! ಬಾಯ್‌ಬಡಿಯುತ
ಕೀಳ ಹೇಳಲೆ! ಕಿತ್ತು ಬಿಟ್ಟೆದು, ಮುರಿದು ಅಲ್ಲೀ ಕೂತರೆ,–?
ಬೇಡ! ಬೇಡವೊ! ತುಂಬ ಯಾತನೆ ದವಡೆ ಕೊಳೆತರು ಕೊಳೆಯಲಿ!
ಇರುವ ನೋವೇ ಇರಲಿಎನಗೆ! ಇರದ ನೋವನು ತರಿಸಲೇಕೆ?
ಕಡಲೆ ತಿನ್ನಲು ಹಲ್ಲೆ ಬೇಡವೆ? ಲಲ್ಲೆಯಾಡಲು ಹಲ್ಲೆ ಬೇಕು!
ಅಲ್ಲಿ ಇರಲದು; ಒಲ್ಲೆ ಒಲ್ಲೆ! ಅಯ್ಯೋ! ಯಾತನೆ! ಯಾತನೆ!

—ಸುಂದರು.

—o—

ನೇಣು!

"ನಮಸ್ಕಾರ ಸಾರ್"

"ಬನ್ನಿ........ಕುಳಿತುಕೊಳ್ಳಿ"

"ನಿನ್ನೆ ಕರ್ಣಾಟಕ ಸಂಘಕ್ಕೆ ಲೆಕ್ಚರ್‌ಗೆ ಬಂದಿದ್ದೆ ಸಾರ್"

"ಬಂದಿದ್ದರ!"

"ನಿಮ್ಮ ಭಾಷಣ ಬಲು ಚೆನ್ನಾಗಿತ್ತು ಸಾರ್"

"ಹೆ....ಹೆ....ಹೆ"

"'ದೇಶವಾಣಿ' ನಿನ್ನೆ ಬಂತು ಸಾರ್,... ಅನ್ಯಾಯಿಲ್ಲಾ!"

"ಓದಿದರ ಆಗಲಿ"

"ನಿಮ್ಮಲೇಖನ ಬಹಳ ಚೆನ್ನಾಗಿದೆ ಸಾರ್"

"ಏನೋ ಇದೆ"....

"ನಿಮ್ಮ ಲೇಖನದ ಸ್ವಾರಸ್ಯ ಬಾಕಿ ಯಾವ ಲೇಖನಕ್ಕೂ ಇಲ್ಲ ಸಾರ್"

"ಥ್ಯಾಂಕ್ಸ್"

"ನೀವು ನಾಟಕದಲ್ಲಿ ಪಾರ್ಟ್‌ಮಾಡ್ತೀರ ಅಂತ ಗೊತ್ತೇ ಇರಲಿಲ್ಲ ಸಾರ್ ನನಗೆ"

"ಓಹೋ ಕಾಶ್ಮೀರ ಯಾತ್ರೆಗೆ ಬಂದಿದ್ದರೋ"

"ಏನ್ ಸಾರ್....ನಿಮ್ಮ ಅಭಿನಯ. ಎಲ್ರನ್ನೂ ಡಂಗುಬಡಿಸಿಬಿತ್ತು!"

"ಹಾಗೆ. ಏನೋ ಮೊದಲಿಂದಲೂ ಅಭ್ಯಾಸ"

"ಲಲಿತ ಪದ್ಮಿನಿ ಡ್ಯಾನ್ಸು ಸಾರ್ ನಾಳೆ ಟವನ್ ಹಾಲಿನಲ್ಲಿ, ಕರ್ಣಾಟಕ ಡ್ಯಾನ್ಸಿಂಗ್ ಅಕಾಡಮಿಗೆ ಬೆನಿಫಿಟ್ಟು .. ತಾವು ಬಂದು ಪ್ರೋತ್ಸಾಹ ಕೊಡಬೇಕು ಸಾರ್"

"ಅಗತ್ಯವಾಗಿ ಬರ್ತೀನಿ"

"ತಮಗೆ ಹೆಚ್ಚಿಗೆ ತ್ರಾಸಕೊಡಲು ನನಗೆ ಇಷ್ಟವಿಲ್ಲಸಾರ್... ೨೫ ರೂ ನ ಟಿಕೆಟ್ ಸಾಕು!. ತೊಗೊಂಡು ಸಹಕರಿಸಿ ಸಾರ್!"

" ...."

—ಶಾ. ಬಾ.

ಯಾತ್ರಿಕರ ಪತ್ರ

—

" ಹಳ್ಳಿ ಹೆಸರು ಚೆನ್ನಾಗಿದೆ—"ಕೈಲಂಚ"—ಯಾವ ಭೂಪತಿ ಇಟ್ನೋ" ಅಂದ ಚಂದಿ.

" ಅದಕ್ಕೇನೋ ಈಗ? ಸುಂದರವಿಲ್ಲಾ, ಸುಖವಿಲ್ಲಾ ಅಂತ ಮನೆಗಳಿಗೆ ಇಡೋಲ್ವೇ? ಹಾಗೇ ಈ ಹೆಸರೂ Self Explanatory" ಅಂದ ರಾಜ.

ಅದಕ್ಕೆ ಚಂದಿ " ಲೋ ಕೈಲಾಸಂ ಮರಿ–ಯಾರಾದ್ರೂ ಹಾಗೆ ತಾವಾಗೆ ಹೇಳ್ಕೋತಾರೇನೋ? ಇದೇನೋ ಸ್ವಾರಸ್ಯವಿದೆ. ಯಾರನ್ನಾದರೂ ಕೇಳೋಣ ಬನ್ರೋ" ಅಂದ.

ಮೂವರೂ ಸೈಕಲ್ ಇಳಿದು ಹಳ್ಳಿಯ ಒಳಕ್ಕೆ ನುಗ್ಗಿದೆವು. ಒಂದು ಮನೆ ಬಾಗಿಲ ಮೇಲೆ ಬಣ್ಣದ ಮರದಗಿಣಿ ತಗುಲಿಸಿದ್ದು ನೋಡಿ, ಅದು ಪಟೇಲರದೇಂತ ತಿಳಿದು ಬಾಗಿಲು ತಟ್ಟಿದೆ. ಚಂದಿ ಒಂದು ಬಾರಿ ಒದ್ದ ಮೇಲೆ ಬಾಗಿಲು ತಾನೇ ತೆರೆಯಿತು. ಯಾರೂ ಕಾಣಿಸಲಿಲ್ಲ. ರಾಜನ್ನ ಒಳಕ್ಕೆ ದಬ್ಬಿದೆವು. ಸ್ವಲ್ಪ ಹೊತ್ತಾದ ಮೇಲೆ ರಾಜ ಒಬ್ಬ ಗೌಡನ ಜೊತೆಯಲ್ಲಿ ಹೊರಗೆ ಬಂದ.

' ಇವರೇ ಈ ಊರಿನ ಪಟೇಲರ ತಮ್ಮ" ಅಂದ. ಗೌಡ ನಮ್ಮಿಬ್ಬರಿಗೂ ಕೈ ಮುಗಿದು ಬಾಯಲ್ಲಿದ್ದ ತಂಬಾಕನ್ನು ಉಗಿದು—ಮನೆ ಮುಂದಿನ ರಸ್ತೆಗೆ—"ದಯಮಾಡಿ ಬುದ್ಧಿ. ಯಾವೂರೊ? " ಅಂದ.

" ಬೆಂಗ್ಳೂರು" ಅಂದೆ.

ನಮ್ಮ ಪುರಾಣ, ದೇಶದ ಹವಾಗುಣ ಎಲ್ಲಾ ಮಾತಾಯಿತು. ಚಂದಿ ಕೊನೆಗೆ ಕೇಳಿದ" ಏನು ಗೌಡ್ರೆ, ನಿಮ್ಮೂರಿಗೆ ಕೈಲಂಚ ಅಂತ ಹೆಸರು ಏಕೆ ಬಂತು? " ಅಂತ.

ಅದಕ್ಕೆ ಗೌಡ " ವಶೀ ಕುಂತ್ಕೊಳ್ಳಿ ಬುದ್ಧಿ. ಸುದಾರಿಸ್ಕೊಳ್ಳಿ" ಅಂತ ಚಾಪೆ ಹಾಸಿದ, ಕುಳಿತೆವು ಮಾಮೂಲು ಉಪಚಾರ–ಹಣ್ಣು ಹಾಲು ಬಂತು.

" ಈ ಊರು ಕಥೆ ಕೇಳಿ ಸ್ವಾಮಿ. ಈಗೊಂದೈತ್ತಲೆ ಯಿಂದಿಂದು "—ಅಂತ ಷುರುಮಾಡಿದ ಗೌಡ—" ಈ ಊರಾಗೊಬ್ಬ ಪಾಳೇಗಾರಿದ್ದ—ಗಿಡ್ನಾಯಕಾಂತ. ವಳ್ಳೆ ಆಳು, ಜನಗಳಿಗೆ ಒಂದು ಕೊರತೆ ಇಲ್ದಾಂಗಮಾಡಿದ್ದ. ಕ್ಷಾಮ ಅನ್ನೋದಿಲ್ಲ

ಅವನ್ನಾಳೆಗಾರ್ಕ್ಲೀಲಿ. ಯಲ್ಡು ಮೂರೊರ್ಸ ಮಳೆ ವುಯ್ದೆ ಯಿದ್ರೂ ನೂವೆ ಕೊರಿತಿಲ್ಲ- ಅಷ್ಟು ಬೆಳೆಸಾಟ ಆಗ, ಕಳ್ತನ ಕೊಲೆ ಅನ್ನೋದೇ ಇಲ್ಲ ಗಿಡ್ನಾಯ್ಕನ ರಾಜ್ಯದಲ್ಲಿ, ಜಮೀನ್ಕೇಳ್ತೀರಾ—ಎಲ್ಲಾ ಜನಗೋಳ್ದೇ. ಎಲ್ರೂ ಬೇಸಾಯ ಮಾಡಬೇಕು, ಎಲ್ರೂ ತಿನ್ಬೇಕು. ನಂಗೆಚ್ಚು ನಿಂಕಡಿಮೆ ಇಲ್ಲ—ಹಾಂಗಿತ್ತು. ವುಟ್ಕೊಂತು ಬುದ್ಧಿ ಒಂದುಳ–ಈ ಊರ್ನಲ್ಲಿ. ಮೇಲ್ನಿಂದ ನವಾಬರ ಆವಳಿ ಹೆಚ್ಚಾಯ್ತು. ನಮ್ಸುತ್ತಿರೋ ದೇಶಾಯೆಲ್ಲಾ ವೋಯ್ತು ನವಾಬರಿಗೆ. ನಮ್ಗಿಡ್ನಾಯ್ಕರೇನೋ ಧೈರ್ವಾಗಿದ್ರು— ನಮ್ಮಾತೇಳ್ತಿದ್ದ. ಊರಿನ ಜನಗೋಳ್ಗೆಲ್ಲಾ ಏಳಿದ ಗಿಡ್ನಾಯ್ಕ—'ನೀವೆಲ್ಲಾ ಧೈರ್ವಾಗಿರಿ. ನವಾಬರ ಸಿಪಾಯಿಗಳಿಗೆ ಉಯ್ಬೇಡಿ. ಉಯ್ಯೋಕೋದ್ರೆ ನಮ್ಮತ್ರ ಆಯ್ಧ ಇಲ್ಲ. ನಾವೆಲ್ಲಾ ನಾಸವಾಗ್ತೀವಿ. ಆದ್ರೆ– ನಿಮ್ಜಾಗ ಬಿಟ್ಕೊಡಬೇಡಿ. ಒಂಚೂರಾಹಾರ—ಕಡೇಗೆ ಒಂದೀಟುನಿರ್ಕೂಡ ಅವರಿಗೆ ಸಿಕ್ದಾಂಗಮಾಡಿ. ವಿಪರೀತ್ವಾದ್ರೆ ಜಮೀನು, ನೆಲ್ದಲ್ಲೂತಿಟ್ಟಿರೋ ದವಸ ಬಿಟ್ಟು-ಎಲ್ಲಾನೂ ಸುಟ್ಟುಬಿಡ್ರಿ. ಒಂದೀಟು ಸಾವು ನೋವಾದಾವು. ಆದ್ರೂ ನವಾಬರ ಕಡೆಯೋರ್ಗೆ ಇಲ್ಲಿ ಊರೋಕೆ ಜಾಗಕೊಡ್ಬೇಡಿ. ದೇವರು ವಳ್ಳೇದು ಮಾಡ್ತ್ಯಾನು" ಅಂತ. ನಂಗಿಡ್ನಾಯಕ್ರೇ ಗಾಂಧಿ ಯಂಗುಟದ್ರೋ ಏನೋ ನಂಕಾಲ್ದಲ್ಲಿ! ನಾಯೇಳಿದ್ನಲ್ಲಾ ಆವುಳ—ನಂಕಡೆ ಯೋನೇ ಸ್ವಾಮಿ? ಆವ. ಆ ನವಾಬರ ಕಡ್ಯೋರು ಏನು ಮಂತ್ರ ಆಕಿದರೋ, ಏನು ಮಂಕ್ಬೂದಿ ಎರ್ಚಿದರೋ—ಆವನಟ್ಟೇಲೇ ಒಂದ್ನೂರು ಸಿಪಾಯ್ಗೋಳ್ಗೆ ಜಾಗ ಕೊಟ್ಟು—ಕಡೇಗೆ ಈ ಊರೆಲ್ಲಾ ನವ್ಸಿಬಿಡೋಂಗಮಾಡಿದ ಪಾಪಿ—ಬ್ಯಾಟಪ್ಪ. ಗಿಡ್ನಾಯ್ಕ ಮಡಿದ. ಆವರ್ಮನೆ ನೆಲಸಮವಾತು. ಇಲ್ಲಿದ್ದ ದೊಡ್ಡ ದೊಡ್ಡ ಮನೆ ತನ್ದೋರೆಲ್ಲಾ ಗತಿಯಿಲ್ದೋರಾದ್ರು. ಬ್ಯಾಟಪ್ಪ ಮಾತ್ರ ಚೆನ್ನಾಗಿ ಆ ಸಿಪಾಯ್ಗೋಳ್ ಜೊತೇಗೆ ಸೇರ್ಕೊಂಡು, ನವಾಬ್ರೇಳ್ದಾಗ್ ಕೇಳ್ಕೊಂಡು ನಾಯಾಗಿ, ತಾನೊಂದು ಜೋಡಿ ಜಾಗಿರ್ದಾರ್ನಾದ. ಇದು ನವಾಬರ ರಾಜ್ಯವಾತು. ಕಡೇಗೇನಾತು? ಎಲ್ಡು ತಲೆ ತನಕ ಅವನ ಮನೆ ದೌಲತ್ ನಡೀತು. ಮಂಗಂಗೆ ಯೆಂಡ ಕುಡಿಸ್ದಾಂಗೆ ಆಡಿ ಅವನ ಮನೆ ನಾಸವಾತು. ಈ ಊರ್ನೋರನಗ್ಯಾಟ ತಡೀಲಾರ್ದೆ ಬ್ಯಾಟಪ್ಪನ ಮೊಮ್ಮಗ ಮಿಕ್ಕಿದ ಆಸ್ತಿನೆಲ್ಲಾ ಒಂದ್ಗುರಕಲ್ಲಿ ಶೀಲಾಕ್ಕೊಂಡು ಈ ವೂರು ಬಿಟ್ಟು ವಾಟಾಕಿತ್ತ. ನವಾಬರ ನವಾಬ್ಗಿರಿ ಇಪ್ಪತ್ತೊರ್ಸನಡೀತು. ಆ ಮ್ಯಾಕೆ ದೇವರು ಕಣ್ಬಿಟ್ನೋಡಿ, ನವಾಬರ ಮಕ್ಳಲ್ಲೇ ವ್ಯಾಜ್ಯವಾಗಿ ನಮ್ಮ ದೇಸದ ಜನವೆಲ್ಲಾ ದಂಗೆದ್ದು ನಮ್ಮ ದೇಸ ನಮ್ದಾಯ್ತು. ಆವಾಗ ನಮ್ಮುತ್ತಾತಿದ್ದ. ಅವನಿಟ್ಟೆ ಈ ಹೆಸರನ್ನ. ಬ್ಯಾಟಪ್ಪನ ಗುರತಾಗಿ. ನಮ್ಮುತ್ತಾತ ಈ ಊರು ಗುಡಿಯಾಗೆ ಒಂದು ಕಲ್ಬರ್ಸನ್ನೆ. "ಲಂಚ ತಿಂದ ಕೈ ಊರಿಗೆ ಬೆಂಕಿ ಹಾಕೋಕೂ ಸೈ" ಅಂತ.

ಗೌಡ ತನ್ನ ತಂಬಾಕಿನ ಕಿಸೆಗೆ ಕೈ ಹಾಕಿದ.

"ಕ್ವೆಸ್ಲಿಂಗ್ ಕಣ್ರೊ?" ಅಂದ ರಾಜ.

"ನಂಗೊಂದು Idea ಬಂತು ಕಣ್ರೋ. ಕೈ ಲಂಚ ಅಂತ ಒಂದು ಸಾವಿರ ಬೋರ್ಡ್ ಬರೆಸಿ ಆ ಸಾಮಿಗಳ ಮನೆಗಳಿಗೆ ನಾವೇಕೆ ರಾತ್ರಿಹೊತ್ತು ನೇತ್ಹಾಕಿ ಬರ ಬಾರದೂಂತ ?" ಅಂದ ಚಂದಿ.

"ಸಾಕಾಗೊಲ್ಲ" ಅಂದ ರಾಜ.

ಕೈಲಂಚ ಬಿಟ್ಟು ಹೊರಟೆವು. ಐದು ಮೈಲಿ ಬರೋ ಅಷ್ಟುಹೊತ್ತಿಗೆ ಬೆಂಕೀ ಪುರ ನೋಡಿದೆವು. ಅಲ್ಲಿ ರಾಜಚಂದಿ ದಂಗೆ ಎದ್ದರು.

ರಾಜ "ನಂಗೆ ಹಸಿವು. ಊಟಮಾಡದೆ ಒಂದು ಅಡಿ ಕೂಡ ಸೈಕಲ್ ತುಳಿಯೋಕಾಗೊಲ್ಲಾ" ಅಂದ.

ಚಂದಿ "ಹೌದೋ. ನನ್ಹೊಟ್ಟೆ ನನ್ನ ಬೆನ್ನಿಂದೆ ಕಾಣಿಸ್ತಾಯಿದೆ ನೋಡು" ಅಂತ ಕೋಟು ಬಿಚ್ಚಿದ.

ಅಷ್ಟರಲ್ಲಿ ನಾನವನನ್ನ ತಡೆದು. "ಬನ್ನಿ ಹೋಟೇಲಿದ್ರೆ ಹುಡುಕೋಣ" ಅಂತ---ಹೊರಟೆವು. ಸ್ವಲ್ಪ ದೂರದಲ್ಲೇ ಒಂದು ಹೋಟೆಲ್-ಬೋರ್ಡು ಕಣ್ಣಿಗೆ ಬಿತ್ತು. ಹತ್ತಿರ ಹೋದ ಮೇಲೆ ರಾಜ "ಲೋ, ಈ ಹೋಟಲಿಗೆ ಬೇಡ. ನೋಡು —ಬಾಗಿಲಲ್ಲೇ ನಿಂತಿದ್ದಾನೆ ಮಾಲೀಕ. ಅವನ ತಲೆ ಕೂದಲು ನೋಡು—ಕೆಂಪು. ಅವನನ್ನ ನಂಬಬಾರದು ಬೇರೆ ಹೋಟಲ್ ನೋಡೋಣ ಬನ್ನಿ" ಅಂದ.

ಗೊಣಗುಟ್ಟುತ್ತಿದ್ದ ಚಂದೀನೂ ಕರ್ಕೊಂಡು ಮುಂದೆ ಹೋದೆವು. ಒಂದರ್ಧ ಮೈಲು ಸುತ್ತಾಡಿದ ಮೇಲೆ ಮತ್ತೊಂದು ಬೋರ್ಡು ಕಾಣಿಸಿತು. ಹುಮ್ಮಸ್ಸಿನಿಂದ ನುಗ್ಗಿದೆವು. ಇನ್ನೇನುವಳಕ್ಕೆ ಹೋಗ ಬೇಕು---ಅಷ್ಟರಲ್ಲಿ ಚಂದಿ ನನ್ನ ಕಡೆದ.

"ಈ ಹೋಟಲಿಗೆ ಬೇಡಿ" ಅಂದ.

ನಂಗೂ ರಾಜಂಗೂ ಆಶ್ಚರ್ಯವಾಯ್ತು.

"ನೋಡ್ರೋ—ಹೊರಬಾಗಿಲಿಗೆ, ಗೋಡೆಗೆ ಮೂರು ಮೂರು ನಾಮ ಬಳಿದಿದ್ದಾರೆ" ಅಂತ ತೋರಿಸಿದ ಚಂದಿ.

ಅದಕ್ಕೆ ರಾಜ "ನಿಂಗೇನಂತೆ ಈಗ? ನಿನ್ನ ಹಣೇಗೆ ಎಗರುತ್ಯೇನವು?" ಅಂದ. ರಾಜಂಗೆ ಹಸಿವಿನ ತಾಪ ಹೆಚ್ಚಾಗಿತ್ತು.

"ನಮದು ಕಳ್ಕೊಕ್ಲ—ತಿರುಪತೀಗೆ ನಾ ಬರೋಲ್ಲ" ಅಂತ ಹಟಹಿಡಿದ ಚಂದಿ.

ವಿಚಾರಿಸಿದ್ದರಲ್ಲಿ ಬೇರೆ ಹೋಟಿಲಿಲ್ಲ. ಸರಿ—ರಾಜನ್ನ ಕಾಲು ಘಂಟೆ ಪುಸಲಾಯಿಸಿ ಮೊದಲಿನ ಹೋಟಲಿಗೆ ಹೋಗೋಕೆ ಒಪ್ಪಿಸಿದೆ. ರಾಜ ಸಮಾಧಾನದಿಂದ 'ಕರಿದಲು ಬಣ್ಣಕ್ಕೆ ಯಾರುತಾನೆ ಏನುಮಾಡ್ತಾರು. ದೇವರು ಕೊಟ್ಟ ಬಣ್ಣ' ಅಂತ ಅಂದುಕೊಂಡೇ ಒಪ್ಪಿದ. ವಾಪಸ್ ಮೊದಲಿನ ಹೋಟಲಿಗೇ ಬಂದೆವು. ಸೈಕಲ್ಲಿಂದಿಳಿದು, ಅವುಗಳನ್ನು ಗೋಡೆಗೊತ್ತರಿಸಿ, ರಾಜನ್ನ ಮಧ್ಯದಲ್ಲಿಟ್ಟುಕೊಂಡು ನಾನೂ ಚಂದಿ ನುಗ್ಗಿದೆವು. ಯಜಮಾನ ನಮಗೆ ಹೆದರಿ ಸ್ವಲ್ಪ ಸರಿದು, ನಾವು ಒಳಗೆ ಹೋದ ಮೇಲೆ

"ಈ ದಿನ ವಾರದ ರಜಾ ಸಾರ್" ಅಂತ ಟೇಬಲ್‌ಗಳ ಮೇಲೆ ಕುರ್ಚಿಗಳನ್ನ ಮಗಚಿಹಾಕಿದ್ದನ್ನ ತೋರಿಸಿದ.

ಸ್ಮಶಾನದಿಂದ ಹೊರಗೆ ಹೊರಟ್ಹಾಗೆ ತುಟಿಪಿಟಿಕ್ಕೆನ್ನದೆ ಹೊರಗೆ ಬಂದೆವು. ಚಂದೀಕಡೆನೋಡಿದೆ.

ಚಂದೀ "ಹೋಗಲಿ ಬನ್ರೋ—ನಾಮದ ಹೋಟಲಿಗೆ ಹೋಗೋಣ. ನಾ ಕಣ್ಮುಚ್ಕೊಳ್ತೀನೆ. ನೀವಿಬ್ರೂ ನನ್ನಕರ್ಕೊಂಡ್ಹೋಗಿ" ಅಂದ. ನಂಗೆ ಆಗವನ್ನ ತಬ್ಬಿಕೊಳ್ಳಲೇ ಅನ್ನಿಸಿತು.

ಸರಿ—ಮೂವರೂ ನಾಮದ ಹೋಟಲಿಗೆ ನುಗ್ಗಿದೆವು—ಕುರುಡು ಚಂದೀನ ಕಟ್ಕೊಂಡು. ಒಬ್ಬ ಆಸಾಮಿ—ಆಜಾನುಬಾಹು—ಖಾಲಿ ಹನುಮಾನ್ ಚೆಡ್ಡಿ ಧರಿಸಿ ಹೊರಗೆ ಬಂದು—

"ಏನು ಬೇಕ್ರೀ ನಿಮಗೆ" ಅಂದ.

ಅವನ ಧ್ವನಿ, ಆಕಾರನೋಡಿ ನಾವೆಲ್ಲಾ ಹಿಂದಕ್ಕೆ ಸರಿದೆವು. ಆ ಮೇಲೆ ನನಗನ್ನಿಸಿತು—ಅವನೆಲ್ಲೋ ದೋಸೆ ಹಾಕುವವ. ಒಳಗೆ ಶಿಖೆ ತಡೀಲಾರ್ದೆ ಗಲಾಟೆ ಇಲ್ಲದ ಕಾಲ್ದಲ್ಲಿ ಹೀಗೇ ಬಂದಿದ್ದಾನೆ ಹೊರಗೆ ಅಂದುಕೊಂಡು.

"ಮೂರೂಟ" ಅಂದೆ.

ಘೊಳ್ಳೆಂದು ನಕ್ಕ. "ಯಾರ್ರೀ ನಿಮಗಿದು ಹೋಟ್ಲು ಅಂತ ಹೇಳಿದ್ದು.? ಹೋಟ್ಲು ಪಾಪರಾಗಿ ಮುಚ್ಚಿ ಮೂರ್ತಿಂಗ್ಳಾಯ್ತು. ನಾವಿಲ್ಲೀಗ ಗರಡೀ ಇಟ್ಕೊಂಡಿದ್ದೇವೆ. ಹೊರಗಡೆ ಬಾಗಿಲ ಮೇಲೆ ಮೂತ್ನಾಮ ಬರೆದಿಲ್ವೆ? ನಿಮಗೆ ಕಾಣಿಸಲಿಲ್ವೆ?" ಅಂತ ತಿರಸ್ಕಾರವಾಗಿ ಹೇಳಿದ.

ಚಂದಿ ರಾಜ ನನಗೆ ಒಂದು ಫರ್ಲಾಂಗ್ ದೂರದಲ್ಲಿ ಸಿಕ್ಕಿದರು. ಆ ಹೊತ್ತಿನ ಊಟ ಕಡಲೆಪುರಿ—ಕಲರ್‌ಗಳಲ್ಲಿ ಮುಗಿಸಿ ಮುಂದೆ ಹೊರಟೆವು ತಲಕಾ—ನಿಮಗೆ ಗೊತ್ತಲ್ಲ!

—ಶೇಷ

ನೀನೆ ವರನಾಗಿ ಬರುವೆ

('ಕುವೆಂಪು' ಕ್ಷಮೆಬೇಡಿ)

ಎನಗಾವ ವರವನು ಕೊಡುವೆನೀನು?
ನಿನಗಾಗಿಯನುದಿನವು ಕೊರಗುವೆನು ನಾನು!

ಅರಿವಿಗಾಗನುದಿನವು ಯತ್ನಿಸಿದವರಿಗೆಲ್ಲ
ಸರಸತಿಯು ಶಪಿಸಿಹಳು ಅರ್ಥಸುಖವ!
ಸಿರಿಗಾಗಿಯನವರತ ಹೋರಾಡಿದವರುಗಳಿ
ಗಿರದೆ ದಯಪಾಲಿಸಿಹಳಮಿತ ಅಜ್ಞಾನವ!

ಅರಿಗಳನು ಕೆಣಕಿ ರಣರಂಗದಲಿಮಡಿದರಿಗೆ
ಧರೆಯಸಿರಿಬೈಚಿಟ್ಟಿಹಳು ಪರಲೋಕಸುಖವ!
ಧರೆಯನನುದಿನ ಬೇಡಿ ಹೊಲಗೆಲಸವೆಸಗುವರಿ
ಗಿರದೆ ದಯಪಾಲಿಸಿಹಳು ರೋಗರುಜಿನ!

ಸಿರಿಯು ಸರಸತಿ ಧಾರಾರಮಣಿಯಿವರೆಲ್ಲರೂ
ಇಂತುವರ ವೀಯುವರು ತಮ್ಮಲೀಲೆಗೆ
ರಮಣ–ನಿನ್ನನೇ ಬಯಸುತಿಹ ಎನಗೆನೀ
ವರವೀಯೆ ನೀನೆ ವರನಾಗಿಬರುವೆ!

—ಶಾ. ರಾ.

—o—

ಹಾಗೂ ಮಾಡು

ಹಾಲು ಕುಡಿಸಬಹುದೇ ಮಗುವಿಗೆ

ಕುಡಿಸಬಹುದಮ್ಮ.

ಅದಕ್ಕೆ ಸಕ್ಕರೆ ಹಾಕಬಹುದೇ?

ಹಾಕಬಹುದಮ್ಮ.

ಸಕ್ಕರೆ ಇಲ್ಲದೆ ಇದ್ದರೆ ಬೆಲ್ಲ ಹಾಕಬಹುದೇ.

ಆಗಬಹುದಮ್ಮ.

ನೀರು ಸೇರಿಸಬೇಕೆ?

ಗಟ್ಟಿಯಾಗಿದ್ದರೆ ಸಮಸಮ ನೀರು ಹಾಕೀಮ್ಮ.

ಗಾಜಿನ ಪಾತ್ರೇಲಿ ಹಾಲಕುಡಿಸಿದರೆ ಒಳ್ಳೆಯದೇ ಡಾಕ್ಟರೇ

ಒಳ್ಳೆಯದಮ್ಮ.

ಮತ್ತೆ ನಮ್ಮತ್ತೆ ಕಂಚಿನಪಾತ್ರೆ ಆರೋಗ್ಯ ಅಂತಾರಲ್ಲಾ

ಅದಕ್ಕೆ ನಿಮ್ಮ ಮಾವನ ಸಲಹೆ ಪಡೀರಮ್ಮ

ಚಮಚ ಚಮಚವಾಗಿ ಕುಡಿಸಿದರೆ ಒಳ್ಳೆಯದೋ, ಗುಟುಕು ಗುಟುಕು ಕುಡಿಸಿದರೆ ಒಳ್ಳೆಯದೋ

ಚಪ್ಪರಿಸುತ್ತಾ ಕುಡಿದರೆ ಚಮಚ ಚಮಚ ಕುಡಿಸಿ, ಗುಟುಕುರಿಸಿ ಕೊಂಡು ಕುಡಿದರೆ ಗುಟುಕು ಕುಡಿಸೀಮ್ಮಾ.

ಸ್ವಲ್ಪ ಅರಿಶಿನ ಸೇರಿಸಿದರೆ ಹಾಲು ಕಾಯುವಾಗ, ಶೀತ ಹರಿಯುತ್ತೆ ಅಂತಾರಲ್ಲಾ ಪಕ್ಕದಮನೆ ಪಾತಮ್ಮ, ಹಾಗೆ ಮಾಡೋದು ಒಳ್ಳೆಯದೇ.

ಇಷ್ಟು ಹೊತ್ತಿಗೆ ಡಾಕ್ಟರಿಗೆ ಯಾಕೋ ಕಾಣೆ ಮಾತನಾಡುವ ಚಪಲ ಹೆಚ್ಚಾಯಿತು. ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡೋದು ಬಿಟ್ಟು, ಕೇಳಬಹುದಾದ ಪ್ರಶ್ನೆಗಳಿಗೆ ತಾನೇ ಉತ್ತರ ಕೊಡಲೇ ಶುರುಮಾಡಿಬಿಟ್ಟ.

ನಾನು ಔಷಧಿ ತೆಗೆದುಕೊಂಡು ಮನೆಗೆ ಹೋಗಿ ಮಗುವಿಗೆ ಕುಡಿಸಿ, ನಂತರ ಊಟಮಾಡಿ ಕಚೇರಿಗೆ ಹೋಗಬೇಕು. ಅವಸರ ನನಗೆ. ನನಗೆ ಮೊದಲೇ ಆಕೆ ಡಾಕ್ಟರ ಹತ್ತಿರ ಈ ಪ್ರಶ್ನೆಗಳನ್ನು ಕೇಳಲು ಶುರುಮಾಡಿದ್ದಳು. ಓದಿದ ಯುವತಿ, ಮಕ್ಕಳು ಮರಿಗಳ ಅನುಭವ ಆಗತಾನೇ ಶುರುವಾದ ವಯಸ್ಸು. ಸುಖವಾಗಿ ಮುದ್ದಾಗಿ ಬೆಳೆದ ಕಳೆ ಡಾಕ್ಟರಿಗೆ ಏಕೆ ಈ ಭಾಷಣದ ಹುಚ್ಚು ಶುರುವಾಯಿತೋ ಕಾಣೆ ನಗುತಾ ನಗುತ್ತಾ ಹೀಗೆ ಹೀಗೆ ಮಾಡಬೇಕು ಎಂದು ಶುರುಮಾಡಿದರು. "ಅಷ್ಟೇ ಅಲ್ಲಾಮ್ಮಾ! ಮಗುವಿಗೆ ಕುಡಿಸುವ ಹಾಲನ್ನು ಮಾತ್ರಕಾಯಿಸಿ ಅರಿಶಿನ ಹಾಕಿ ಗಾಜಿನ ಪಾತ್ರೇಲಿ ಕುಡಿಸಿದರೆ ಸಾಲದು. ಹಾಲು ಕೊಡುತ್ತಲ್ಲಾ ಹಸು, ಅದಕ್ಕೆ ಹಿಂದಿನದಿವಸ ಅರಿಸಿನದ ಕೊನೆ ತಿನ್ನಿಸಬೇಕು ಅದು ತಿನ್ನುವ ಹುಲ್ಲಿಗೆ ಸಮಸಮ ಬೂಸಹಾಕಬೇಕು. ಸಿಮೆಂಟ್ ತೊಟ್ಟಿಯಲ್ಲೇ ಅದು ನೀರು ಕುಡಿಯಬೇಕು. ಹಾಗೆ ಮಾಡಿದನಂತರ ಮಾರನೆದಿನ ಹಸುವಿಗೆ ಶಾಸ್ತ್ರೋಕ್ತವಾಗಿ ಎಣ್ಣೆನೀರು ಹಾಕಬೇಕು. ಕಡಲೇಹಿಟ್ಟಿನಲ್ಲಿ ಅದರ ಕೆಚ್ಚಲು ತೊಳೆಯಬೇಕು. ನಂತರ ಸಾಂಬ್ರಾಣಿ ಹೊಗೆ ಹಾಕಬೇಕು. ನಂತರ ಹಾಲನ್ನು ಹಿಂಡಬೇಕು, ದೊಡ್ಡಗಾಜಿನ ಪಾತ್ರೆಗೆ. ನಂತರ ಆ ಪಾತ್ರೆಯನ್ನು ಮಡಿಯಾಗಿ ಅಡಿಗೆ ಮನೆಗೆ ತೆಗೆದುಕೊಂಡು ಹೋಗಿ ಸುಮಾರು ೮೦ ಡಿಗ್ರಿಯಷ್ಟು ಕಾವಿನಲ್ಲಿ ಕುದಿಸಬೇಕು, ಹಾಗೆ ಹಾಲು ಕುದಿಯುವಾಗ ನೀವೂ ಕುದಿಯಬೇಕು.

ಡಾಕ್ಟರೇ ಯಾಕೋ ಕುದೀತಿದಾರೆ, ಯಾವಾಗಲೂ ಹೀಗೇ! ಏನು ಕೇಳಿದರೂ ಎಲ್ಲಾದಕ್ಕೂ ಹಾಸ್ಯಮಾಡ್ತಾರೆ" ಎಂದುಕೊಂಡು ಆಕೆ ಮಗುವನ್ನೆತ್ತಿಕೊಂಡು ಹೊರಟಳು.

ಆಮೇಲೆ ನನ್ನಸರ್ತಿ. ಮಗುವಿನ ಕಾಯಿಲೆ ಕೇಳಿ ಚೀಟಿ ಬರೆದುಕೊಟ್ಟರು ದಿನಕ್ಕೆ ಮೂರುಸರ್ತಿ ಇದನ್ನು ಕೊಡಿ ಎಂದರು ಡಾಕ್ಟರು.

ಆ ಚೀಟಿ ತೋರಿಸುತ್ತಾ 'ಇದನ್ನು' ಎಂದರೆ ಈ ಚೀಟೀನೇ ಮೂರುಭಾಗ ಹರಿದು ಕೊಡಬೇಕೇ " ಎಂದೆ.

ಹಾಗೂಮಾಡು, ಹಾಗೂ ದೇವರು ವಾಶಿಮಾಡ್ತಾನೆ ಅಂದರು ಡಾಕ್ಟರು.

——o——

ಬಾತ್ ರೂಂ

ಜಡ್ಜಿಮಹಾಶಯರು ಹಾಗೆ ಹೇಳಿದ್ದೇ ಬಂತು, ಗ್ರಹಚಾರ. ವಾದಿ ಪ್ರತಿವಾದಿ, ಅಪರಾಧಿ ಪೋಲೀಸ್ ಅವರವರ ಬುದ್ಧಿಗೆ ತಕ್ಕಂತೆ, ಸತ್ಯ ಅಸತ್ಯ ಬೆರೆಸಿ, ಅವರ ಮುಂದೆ ತಮ್ಮ ತಮ್ಮ ಕಥೆ ಕಾದಂಬರಿಗಳನ್ನು ವಿವರಿಸಿದರೆ, ಸಾಲದೆ, ನಡು ನಡುವೆ ಅವರೇಕೆ ಬಾಯಿ ಹಾಕಬೇಕು? ಹಾಕಿದರು, ಬಂತು ವಿಪತ್ತು!

ಇನ್ನೇನೂ ಇಲ್ಲ! ಯಾವನೋ ಕಾಡಣ್ಣ, ಕದ್ದ ಅಂತ ಕೇಸು. ಪೋಲೀಸಿನವರ ಹತ್ತಿರ ಒಂದು ರೀತಿ ಹೇಳಿದ್ದ; ಕೋರ್ಟಿನಲ್ಲಿ ಮತ್ತೊಂದು ತರಹ ಹೇಳಿಕೆ ಕೊಟ್ಟ. ಆ ಕಿವಿಯಲ್ಲಿ ಇದು, ಈ ಕಿವಿಯಲ್ಲಿ ಅದು, ತುಂಬಿಕೊಂಡು, ತನಗೆ ತೋಚಿದಂತೆ, ತೀರ್ಪುಕೊಟ್ಟರೆ, ಸಾಲದೆ? ಊಹೂಂ, "ಒಮ್ಮೆ ಒಂದು ರೀತಿ ಹೇಳಿ, ಅದನ್ನ ನಂತರ ತಿದ್ದಿಕೊಳ್ಳುವುದರಲ್ಲಿ ತಪ್ಪಿಲ್ಲ", ಎಂದರು.

"ನಾನು ಇವತ್ತು ಇಲ್ಲಿ ಬಂದು ಕೂತಾಗ, ನೀವು ನನ್ನನ್ನ, ಸ್ವಾಮಿ! ಗಡಿಯಾರ ತಂದಿದೀರಾ, ಎಂದು ಕೇಳಿದ್ದರೆ, ತಂದಿದೇನೆ, ಎಂದು ನಾನು ಹೇಳುತ್ತಿದ್ದೆ. ಆದರೆ, ಈಗ ನನಗೆ ಗೊತ್ತಾಗಿದೆ, ನಾನು ತಂದಿಲ್ಲ, ಎಂದು. ನನ್ನ ಕೈ ಗಡಿಯಾರವನ್ನ ನಾನು ನನ್ನ ಬಾತ್‌ರೂಮಿನಲ್ಲೇ ಇರಿಸಿ, ಮರೆತು ಬಂದೆ"— ಎಂದರು.

ವಾದ ಮುಂದುವರಿಯಿತು. ಗಡಿಯಾರದ ಮುಳ್ಳು ಸರಿಯಿತು. ಸಂಜೆ ಆಯಿತು. ಕೋರ್ಟು ಮುಗಿಯಿತು! ಅವರು ಮನೆಗೆ ಹಿಂತಿರುಗಿದರು.

ಆಗ, ಅವರ ಧರ್ಮಪತ್ನಿ ಅಂದರು, "ಇದೇನಿದು? ಇಷ್ಟೊಂದು ಜನಗಳನ್ನ ಸಾಲಾಗಿ ಕಳುಹಿಸಿದೀರಿ, ಇವತ್ತು, ಮನೆಗೆ....ಆ ನಿಮ್ಮ ಕೈ ಗಡಿಯಾರವನ್ನ ಕೋರ್ಟಿಗೆ ತರುವುದಕ್ಕಾಗಿ?" ಎಂದರು. "ಹಾ! ನಾನು ಯಾರನ್ನೂ ಕಳುಹಿಸಲಿಲ್ಲವಲ್ಲಾ?" "ಎಂಟು ಜನ ಬಂದರು, ಒಬ್ಬರಾದ ಮೇಲೊಬ್ಬರು. ಮೊದಲು ಬಂದವನ ಹತ್ತಿರವೇ ಕೊಟ್ಟು ಕಳುಹಿಸಿದೆ....ಬಾತ್‌ರೂಮಲ್ಲೇ ಇದೆ, ಅಂತ ಅವನೂ ಹೇಳಿದ....ಎಲ್ಲರೂ ಹೇಳಿದರು" ಎಂದರು, ಆಕೆ.

—o—